
ಕೊರವಂಜಿ



KORAVANJI
Kannada Monthly

ಜನವರಿ
೧೯೬೬

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಆ. ರಾ. ಸೇ.
ಶ್ರೀ|| ಒಟ್ಟ
ಶ್ರೀ|| ಕೆ. ಎನ್. ಕಿಟ್ಟನ್
ಶ್ರೀ|| ದತ್ತ
ಶ್ರೀ|| ಕಿರಣ ಗುಲ್ಲೂರು
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ಪ್ರಸಾದ್

ಇತ್ಯಾದಿ ಇತ್ಯಾದಿ.

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


MYSORE SANDAL OIL
Yet to meet its master!
Mysore Sandalwood Oil is the purest and highest grade of Sandalwood Oil available. Whether for pharmaceutical use or manufacture of soap and perfumery — Sandalwood Oil bearing the name 'Mysore stands unsurpassed.
Mysore
SANDALWOOD OIL
A MYSORE GOVERNMENT PRODUCT

ಕೊರವಂಜಿ

ಸಂಪುಟ ೨೪] ಜನವರಿ ೧೯೬೬ [ಸಂಚಿಕೆ ೧೦

ಶುಭಾಶಯಗಳು

ಶಾಂತಿ, ಮತ್ತು ಪ್ರೇಮ ; ಈ ಸಂದೇಶವನ್ನು ವಿಶ್ವಕ್ಕೆ ಅನುಗ್ರಹಿಸಿದ ಪವಿತ್ರಾತ್ಮ ಯೇಸುವು ಜನ್ಮ ತಾಳಿ ೧೯೬೫ ವರ್ಷಗಳು ಮುಗಿದುವು. ಹುತಾತ್ಮನ ಹೆಸರನ್ನು ಸ್ಮರಿಸಿಕೊಂಡು ಭಕ್ತಿಯಿಂದ, ಒಲವಿನಿಂದ ಕ್ರಿಶ್ಚಿಯನ್ನರು, ಹೊಸ ವರ್ಷದ ಪ್ರತಿಜ್ಞೆಗಳನ್ನು ಮಾಡುತ್ತಾರೆ.

ಪ್ರತಿಜ್ಞೆಗಳನ್ನು ಮಾಡುತ್ತಾರೆ. ಅಷ್ಟೆ. ಆಚರಣೆಗೆ ತರಲು ಸ್ವಾರ್ಥವು ಅಡಚಣೆಯಾಗಿ ವಿರಾಡ್ರೂಪ ಧರಿಸುತ್ತದೆ.

ಅಂತೆಯೇ ಇಂದು, ನಾಗಾಲ್ಯಾಂಡ್, ವಿಯಟ್ನಾಂಗಳಲ್ಲಿ ಕ್ರಿಶ್ಚಿಯನ್ ಕ್ರಿಶ್ಚಿಯನ್ನರೇ ಸಮರ ದ್ವೇಷಗಳನ್ನೇ ಹರಡುತ್ತಿದ್ದಾರೆ.

ಆದುದರಿಂದಲೇ ಕೊರವಂಜಿಯು ಮಂಡಿಯೂರಿ ಭಗವಂತನನ್ನು ಪ್ರಾರ್ಥಿಸುತ್ತಾಳೆ.

" ಕರುಣಾಮಯನೇ ! ಮಾನವನ ಸ್ವಾರ್ಥದ ಸಹಸ್ರಾರು ಹೆಡೆಗಳ ಸ್ವರೂಪವನ್ನು ಮಾನವನಿಗೆ ಪ್ರತ್ಯಕ್ಷ ಮಾಡಿಸಿಕೊಡು. ಅನಂತರ ಮಾನವನೇ ತನ್ನ ಉದ್ಧಾರವನ್ನು ಸಾಧಿಸಿಕೊಳ್ಳುತ್ತಾನೆ. ಯೇಸು ಆಸೆ ಪಟ್ಟಂತೆ ಜನ ಪ್ರೇಮಮಯ ಬಾಳು ನಡೆಸುತ್ತಾರೆ. "

" ಎಲ್ಲರಿಗೂ ಈ ವರವನ್ನು ಕರುಣಿಸಲಾಗದಿದ್ದರೆ ನಮ್ಮ ಓದುಗರು, ಬಂಧು ಬಳಗದವರಿಗಾದರೂ ಕರುಣಿಸಪ್ಪ !"

ಕುಹಕಿಡಿಗಳು

"ಸುಬ್ರಹ್ಮಣ್ಯಂ ಗಂಜೀ"ನ ಅವರೆಲ್ಲ ಕುಡಿಸಿದರು ಅಂತ

—ನಮ್ಮಾಕೆ ತುಂಬೆಸೊಪ್ಪಿನ ಅಂಬಲಿ ಬಡಿಸಿ, "ಜಟ್ಟಿ ಅಂಬಲಿ" ಕುಡೀರಿ ಅಂದಳು.

*   *   *   *

ಮೊನ್ನೆ ಹುಟ್ಟಿದ ಮಗುವು ಬೆರಳಿಗೆ "ಲೂಪ್" ಸಿಕ್ಕಿಸಿಕೊಂಡಿತ್ತು ಎನ್ನುವುದು ಶುದ್ಧ ಊಹೆ.

*   *   *   *

ರಾಜೀವಪುರದ ಮುನಿಸಿಪಾಲಿಟಿಯು ಮೆಂಬರುಗಳ ಹೆಸರನ್ನು ರಸ್ತೆಗಳಿಗಿಡಬೇಕು ಎಂದು ಯೋಚಿಸುತ್ತಿದ್ದಾರಂತೆ.

—ಛೇ ! ಛೇ ಅದರ ಬದಲು ರಸ್ತೆಗಳ ಈಗಿನ ಹೆಸರುಗಳನ್ನು ಮೆಂಬರುಗಳಿಗೆ ಇಟ್ಟರೆ ಇನ್ನೂ ಚೆನ್ನು ! "ಲೋ ಏಳನೇ ಗಲ್ಲಿ ಚೆನ್ನಾಗಿದ್ದೀಯಾ" ಅಂದರೆ ಎಷ್ಟು ಅನ್ವರ್ಥ.

*   *   *   *

ವಿಧಾನಸಭೆಯ ಕಾರ್ಯಕಲಾಪಗಳನ್ನು ಆಕಾಶವಾಣಿಯು ಪ್ರಚಾರ ಮಾಡಬೇಕು ಎಂದೊಬ್ಬರ ಅಂಬೋಣ.

—ಏನೋ ಕೆಟ್ಟ ರೋಗ ಅವರಿಗೆ—

*   *   *   *

ಸಂತೆಗೆ ಮೊದಲು ಗಂಟು ಕಳ್ಳರು ನೆರೆದರು

—ಜೈಪುರಕ್ಕೆ ಹಾಗಾದರೆ ನಮ್ಮರ ಜೇಬುಗಳ್ಳರೆಲ್ಲಾ ಹೊರಟಿದ್ದಾರೆಯೋ ?

*   *   *   *

ರೇಷನ್ ಅಂಗಡಿ ಅಂತ ಭಾರಿ ಬೋರ್ಡು.

—ಆಪ ರೇಷನ್ ಆಯ್ತು—ಆಸೆಯಿಂದ ಒಳಗೆ ಹೋದಾಗ.

*   *   *   *

ಕಡಾ ಹುಟ್ಟಿ ಬಡದೇಶ ಕೆಟ್ಟು ಹೋಯೀತು.

—ಸಾಲದ ಗೋಧಿ ಸಿಕ್ಕಿ ಮುಂದೆ ಶೂಲವಾಯ್ತು.

ವಿಯನ್ನಾ ಬೈ ನೈಟ್

ರಾತ್ರಿ ೮ ಗಂಟೆಗೆ ಊಟದಶಾಸ್ತ್ರವನ್ನೂ ಮುಗಿಸಿ ವಿಯನ್ನಾದ ವೆಸ್ಟ್ ಮಿನಿಸ್ಟರ್ ಹೊಟೇಲಿನ ಅಂಗಳದಲ್ಲಿ ಕಾದಿದ್ದೆ, ಸುಮಾರು ಒಂಭತ್ತರ ಹೊತ್ತಿಗೆ ವಿಯನ್ನಾ ಬೈ ನೈಟ್ ತೋರಿಸುವ ಬಸ್ ಬಂತು. ಅಂದು ಬೆಳಿಗ್ಗೆಯೇ ನಮ್ಮ ಹೋಟೇಲಿನಲ್ಲಿ ನಾಲ್ಕು ಜನ ಈ ಬಸ್ಸಿನಲ್ಲಿ ರಾತ್ರಿ ಪ್ರವಾಸಕ್ಕೆ, ಪ್ರದರ್ಶನಗಳಿಗೆ ಟಿಕೆಟ್ ಕೊಂಡಿದ್ದೆವು. ನಾಲ್ವರೂ ಹೋಗಿ ಬಸ್ಸಿನಲ್ಲಿ ಕೂತೆವು. ಧಗ ಧಗ ದೀಪಗಳುರಿಯು ತ್ತಿದ್ದ ದೊಡ್ಡ ದೊಡ್ಡ ರಸ್ತೆಗಳಲ್ಲಿ ಬಸ್ ಹೋಗಿ ಕಡೆಗೊಂದು ಅಡ್ಡರಸ್ತೆಯಲ್ಲಿ ತಿರುಗಿ ಒಂದು ಕಡೆ ನಿಂತಿತು. ಬಸ್ಸಿನಲ್ಲಿದ್ದ ನಾಲ್ವರು ಅಮೆರಿಕನ್ನರು, ನಾಲ್ವರು ನಾವು ಭಾರತೀಯರು, ಎಂಟುಜನ ಇಂಗ್ಲಿಷಿನವರು, ಮಿಕ್ಕವರೆಲ್ಲ ಯೂರೋಪಿಯ ನ್ನರು, ಬುಡ ಕಟ್ಟು ಸುಲಭವಾಗಿ ಗೊತ್ತಾಗಲಿಲ್ಲ, ಎಲ್ಲರೂ ಇಳಿದೆವು. ಮಾರ್ಗ ದರ್ಶಿಯನ್ನು ಹಿಂಬಾಲಿಸಿದೆವು.

ಸಂದಿಯಲ್ಲಿದ್ದ ಒಂದು ಬಾಗಿಲು ತಟ್ಟಿದ, ಬಾಗಿಲು ತೆರೆಯಿತು. ಓಣಿ ಯಂತಿದ್ದ ಆ ವರಾಂಡಾ ಕಾಣಿಸಿತು. ಅದರಲ್ಲಿ ನಡೆದು ಸುಮಾರು ದೂರ ಹೋದಾಗ ದೊಡ್ಡ ಅಂಗಳ ಕಾಣಿಸಿತು. ನಾಲ್ವರೂ ನಾವು ಅಲ್ಲಿದ್ದ ಮೇಜೊಂದರ ಬಳಿ ಕುಳಿತೆವು

ಇಬ್ಬರು ಹುಡುಗಿಯರು ಒಬ್ಬ ಬಂದರು. ನಮ್ಮೂರಿನಲ್ಲಿ ರಸ್ತೆಪಕ್ಕದ ಮೈದಾನದಲ್ಲಿ ದೊಂಬರಾಟ ಕಟ್ಟುಲ್ಲವೇ ? ಅದೇತರಹ ಆ ಮೂವರೂ ದೊಂಬ ರಾಟ ಆಡಿದರು. ಹಿಂದು ಹಿಂದಕ್ಕೆ ವರ್ತುಳಾಕಾರದಲ್ಲಿ ಇದ್ದಲ್ಲೇ ಪಲ್ಟಿಹೊಡೆಯುವುದು ಮುಂದು ಮುಂದಕ್ಕೆ ಅದೇ ತರಹ ಪಲ್ಟಿ ಹೊಡೆಯುವುದು. ಯುವಕನ ಎರಡು ತೋಳುಗಳಮೇಲೆ ಹುಡುಗಿಯರು ನಿಂತು ಕೊಂಡು, ಆ ಹುಡುಗ ಎದ್ದುನಿಂತಮೇಲೆ ಅಲ್ಲಿಂದ ಕೆಳಕ್ಕೆ ಧುಮುಕುವುದು. ದೇಶಾವರದ ನಗೆ ಪ್ರದರ್ಶಿಸುವುದು. ಇತ್ಯಾದಿ ಐದು ನಿಮಿಷ ಆಡಿದರು. ಪ್ರಾಯಶಃ ವಿಯನ್ನಾದಲ್ಲಿ ಬಹಿರಂಗ ಸ್ಥಳಗಳಲ್ಲಿ ಬೆಳಿಗ್ಗೆ ಆಡಲು ಅವಕಾಶವಿಲ್ಲವೇನೋ ? ಆದುದರಿಂದ ರಾತ್ರಿ ಹೀಗೆ ಆಟಕಟ್ಟಿ, ಪರದೇಶ ದಿಂದ ಬಂದವರಿಂದ ಹಣಸಂಪಾದಿಸಿ, ಹೊಟ್ಟೆಹೊರೆದು ಕೊಳ್ಳುತ್ತಾರೇನೋ ಎಂದು ಕೊಂಡೆ.

ಅದಾದ ಮೇಲೆ ಐದು ನಿಮಿಷ ಸಂಗೀತ. ಸಾಮೂಹಿಕ ನೃತ್ಯ. ಅಂದರೆ ಅಲ್ಲಿಗೆ ಬಂದಿದ್ದವರು ಜತೆ ಕೂಡಿಕೊಂಡು ಕುಣಿಯುವುದು.

ಅನಂತರ ಸುಮಾರು ತೂಕವಿದ್ದ ಹೆಣ್ಣೊಂದು ಬಂದು ನೃತ್ಯಮಾಡಿತು ತುಂಬಾ ಎಳಕಾದ ಮುಖ ೧೮–೧೬ರ ಪ್ರಾಯ. ಆದರೂ ತುಂಬಿಕೊಂಡಿತ್ತು, ಮೈ ಸೊಳ್ಳೆ

ಪರದೇಲಿ ಉಡುಪು ಹೊಲಿಸಿಕೊಂಡು ಈ ಹೆಣ್ಣು ಕುಣಿಯುತ್ತಿತ್ತು. ನೃತ್ಯವನ್ನು ನೋಡಿದರೋ, ಅಥವಾ ಈ ಬೂಸಕ್ಕನ್ನು ನೋಡುತ್ತಿದ್ದರೋ, ಅಲ್ಲಿದ್ದ ಜನ, ಹೇಳಬರುವಂತಿಲ್ಲ. ಅಂಗ ವಿನ್ಯಾಸವಾಗಲಿ, ಕಾಲುಕುಣಿತವಾಗಲಿ, ಶ್ರೇಷ್ಠತರದ್ದಲ್ಲ,

ಆ ಮೇಲೆ ತಿರುಗಿ ಸಾಮೂಹಿಕ ನೃತ್ಯ, ಸಂಗೀತ ಕುಣಿತದ ತರಹ ಬಂದಿದ್ದವರೆಲ್ಲರೂ ಭಾಗಿಗಳಾಗಿದ್ದರು,

ಅದಾದಮೇಲೆ ಕಾಲಿಗೆ ತಾಳ, ಕೈಯಲ್ಲಿ ಕಂಜಿರ. ಬಾಯಲ್ಲಿ ತುತ್ತೂರಿ, ಸೊಂಟಕ್ಕೆ ಗಿಲಗಿಲಿ ಕಟ್ಟಿಕೊಂಡಿದ್ದವನೊಬ್ಬ ಬಂದು, ಬಾಂಡ್ ಬಾರಿಸಿದ, ಹತ್ತೂಜನ ಒಟ್ಟಿಗೆಮಾಡುವ ಕೆಲಸವನ್ನು ಇವನೊಬ್ಬನೇ ಮಾಡುತ್ತಿದ್ದ. ಮಂದಿ ಚಪ್ಪಾಳೆ ತಟ್ಟಿತು. ಭೇಷ್ ಅಂದಿತು. ನಾನೂ ಗುಟುಕು ನುಂಗಿದೆ.

ಅನಂತರ ಮಾರ್ಗದರ್ಶಿ ಎದ್ದ, ಹೊರಹೊರಟ. ಕರಿಕುರಿಯ ಹಿಂದೆ ಮುಂದೆ ಹೋಗುವಂತೆ ನಾವೂ ಹಿಂಬಾಲಿಸಿದೆವು. ಛೇ !ಛೇ ಹಾಗನ್ನಬಾರದದೇನೋ ? ಬಿಳಿ ಕುರಿಯಹಿಂದೆ ಕರಿಮುಂದೆ ಹೋಗುವಂತೆ ; ಅನ್ನಬೇಕಾಗಿತ್ತು, ಹೋಗಿ ಬಸ್ಸಿನಲ್ಲಿ ಕುಳಿತೆವು. ತಿರುಗಿ ಆ ಬಸ್ಸು. ದೊಡ್ಡರಸ್ತೆ ಅಡ್ಡರಸ್ತೆ ಗಿಡ್ಡರಸ್ತೆಗಳನ್ನು ಹಾದು ಒಂದು ಓಣಿಯ ಪಕ್ಕದಲ್ಲಿ ನಿಂತಿತು,

ತಿರುಗಿ ಎಲ್ಲರೂ ಇಳಿದು ತುಸದೂರ ನಡೆದುಹೋಗಿ ಒಂದು ಬಾಗಿಲಬಳಿ ನಿಂತೆವು, ಬಾಗಿಲು ತೆರೆಯಿತು. ಎದುರಿಗೆ ಎರಡಡಿ ಅಗಲವಿರುವ ಮೆಟ್ಟಿಲುಗಳು. ಇಪ್ಪತ್ತು ಕಡಿದಾದ ಮೆಟ್ಟಿಲುಗಳನ್ನು ಹತ್ತಿ ಎಡಕ್ಕೆತಿರುಗಿ, ತಿರುಗಿ ಮೆಟ್ಟಿಲುಗಳನ್ನೇ ಹತ್ತಿ ಕಡೆಗೆ ಒಂದು ಅಟ್ಟ ಸೇರಿದೆವು. ಅಲ್ಲಿ ನಮಗಾಗಿ ಮೀಸಲಿದ್ದ ಕುರ್ಚಿಗಳಮೇಲೆ ಒತ್ತಡವಾಗಿ ಕುಳಿತೆವು. ಬಲಗಡೆ ವಾರೆಯಾಗಿ ಎದುರಿಗೆ ರಂಗ ಮಂಟಪ. ಬಲಗಡೆಗೆ ಹಳ್ಳದಲ್ಲಿ ಪ್ರೇಕ್ಷಕರೆಲ್ಲ ಕುಳಿತಿರುವ ದೃಶ್ಯ, ೨೦೦-೩೦೦ ಮಂದಿ ಕುಳಿತಿದ್ದಿರ ಬಹುದು.

ಪ್ರದರ್ಶನ ಶುರುವಾಗಿತ್ತು. ಒಂದು ಹೆಣ್ಣು ಏಳು ಚೆಂಡುಗಳನ್ನು ದೊಂಬರ ತರಹ ಕುಣಿಸುತ್ತಿದ್ದಳು. ಎರಡೂ ಕೈಗಳಲ್ಲಿ ಎರಡು ಚೆಂಡುಗಳು. ಎಡಗೈಯಿಂದ ಒಂದು ಚೆಂಡನ್ನು ಚಿಮ್ಮುವಳು. ಅದು ಮೇಲಕ್ಕೆ ಹೋದಾಗ ಬಲಗೈಯಿಂದ ಚೆಂಡನ್ನು ಎಡಗೈಗೆ ಎಸೆಯುವಳು. ಮೇಲಿಂದ ಇಳಿಯುತ್ತಿದ್ದ ಚೆಂಡನ್ನು ಬಲಗೈಯಲ್ಲಿ ಹಿಡಿಯುವಳು. ಚೆಂಡುಗಳೆಲ್ಲಾ ದೊಡ್ಡ ಸೊನ್ನೆಯ ಸುತ್ತ ಸುತ್ತುತ್ತಿದ್ದಂತೆ ಭಾಸವಾಗುತ್ತಿತ್ತು. ಅವಳ ಕೈ ಚಳಕ ಅಷ್ಟು ಚೆನ್ನು. ನಮ್ಮೂರ ಸರ್ಕಸುಗಳಲ್ಲಿ ಈ ಚಮತ್ಕಾರವನ್ನು ಎಷ್ಟೋಬಾರಿ ನೋಡಿದ್ದೇನೆ. ಇದೇನು ಮಹಾ ಎಂದುಕೊಂಡೆ. ನನ್ನ ಪಕ್ಕದಲ್ಲಿ ಕುಳಿತಿದ್ದವ ಅಮೆರಿಕನ್ ಮುದುಕ ಒಬ್ಬ. ಮೊಣಕೈಯಿಂದ ನನ್ನನ್ನು ತಿವಿದ. ಎಷ್ಟು ಚೆನ್ನಾಗಿ ಆಡ್ತಾಳೆ ನೋಡಿ. ಐದೇ ಚೆಂಡುಗಳಲ್ಲಿ ಆಕೆ ಆಡ್ತಾ ಇರೋದು. ಆದರೆ ನೋಡುವವರಿಗೆ ಏಳರ ತರಹ ಕಾಣಿಸುತ್ತೆ" ಎಂದ. ತಿರುಗಿ ನೋಡಿದೆ. ದಿಟ ಅವನು ಹೇಳಿದ್ದು. ಐದೇ ಚೆಂಡುಗಳು ತಿರುಗುತ್ತಾ ಇದ್ದುವು.

ಎಂಕ್ಕೆರಡೂ ಇದ್ದಲ್ಲೇ ಇದ್ದುವು. ಆದರೂ ಕೈ ಚಳಕದ ವೇಗದಲ್ಲಿ ವ್ಯತ್ಯಾಸ ಗೊತ್ತಾಗುತ್ತಲೇ ಇರಲಿಲ್ಲ.

ಅದಾದಮೇಲೆ ಇಬ್ಬರು ನರ್ತಕರು ಬಂದರು. ಸದಾರಮೆ ನಾಟಕದ ಕಳ್ಳನ ತರಹ ಉಡುಪು ಧರಿಸಿದ್ದ ಯುವಕ ಒಬ್ಬ. ಅದೇ ರೀತಿ ಪೈಜಾಮಾ ಒತ್ತಾಗಿ ಧರಿಸಿದ್ದ ಯುವತಿ ಒಬ್ಬಳು. ಅಪಾಚಿ ಡ್ಯಾನ್ಸ್ ಅಂತ ಪಕ್ಕದಲ್ಲಿದ್ದವ ತಿವಿಯುತ್ತಾ ಹೇಳಿದ. ದಿಟವಾದ ವ್ಯಾಯಾಮ ಪ್ರದರ್ಶನವೇ ಅದು. ಅವಳ ಬಲಗೈ ಹಿಡಿದು ತನ್ನ ಸುತ್ತ ಗಿರಿಗಿಟ್ಲೆ ಸುತ್ತುವ ಹಾಗೆ ಆಕೇನ ತಿರುಗಿಸಿದ. ಹಿನ್ನೆಲೆಯ ಹಿತವಾದ ಸಂಗೀತ. ನಂತರ ಅವಳು ನಿಂತಿದ್ದಳು. ಏನು ಬಂತೋ ಅವನಿಗೆ. ಜಟ್ಟಂತ ಹೋಗಿ ಅವಳ ಕೆನ್ನೆಗೆ ಲಪ್ಪಂತ ಹೊಡೆದ. ತತ್ತರಿಸುತ್ತ ಆಕೆ ಹಿಂದಕ್ಕೆ ಹೋದಳು. ಕುಣಿಯುವ ಹೆಜ್ಜೆಗಳನ್ನು ಹಾಕುತ್ತಲೇ, ಸಂಗೀತದ ಹಿನ್ನೆಲೆಗೆ ಸರಿತಾಳ ಹಾಕುತ್ತಲೇ ತತ್ತರಿಸಿದಳು. ದೂರ ಹೋಗಿ ನಿಂತಳು. ಸುಧಾರಿಸಿಕೊಂಡಳು. ತಿರುಗಿ ಬಂದು ಸೇಡು ತೀರಿಸಿಕೊಳ್ಳಲು ಇವನನ್ನು ಹೊಡೆಯುಕ್ಕೆ ಆಂಗೈ ಎತ್ತಿ ಬಂದಳು. ಹತ್ತಿರ ಬಂದಳು. ಸುಕ್ಕಂತ ಅವಳ ತೋಳುಗಳನ್ನು ಹಿಡಿದು ತನ್ನ ತಲೆಮೇಲಕ್ಕೆ ಎತ್ತಿದ. ಅಲ್ಲಿ ಆಕೆಯನ್ನು ಅಪ್ಪಾಲೆ ತಿಪ್ಪಾಲೆ ತಿರುಗಿಸಿದ. ಸುಮಾರು ವಜನ್ ಇದ್ದಳು ಆಕೆ. ಏನಿಲ್ಲ ಅಂದರೂ ೪೧-೫೦ ಕಿಲೋಗ್ರಾಂ. ಲೀಲಾಜಾಲವಾಗಿ ಆಕೇನ ಎತ್ತಿ ತಿರುಗಿ ಸುತ್ತಿದ್ದ. ಇವನ ತೂಕ ಸುಮಾರು ೭೦ ಕಿಲೊ ಇದ್ದಿರಬಹುದು. ಪರವಾಗಿಲ್ಲ ತೆಳ್ಳಗಿದ್ದರೂ ವಸ್ತಾದಿಯಾಗಿದಾನೆ ಎನಿಸಿತು.

ಇದೇ ರೀತಿ ವ್ಯಾಯಾಮದ ಚಕ್ಕಂದ ಆಡಿದರು. ಸ್ವಲ್ಪ ಹೊತ್ತು. ಸಂಗೀತದವರು ಅಲ್ಬಿದಾಯಾ ತರಹ ಯಾವುದೋ ಮಟ್ಟನ್ನು ಬಾರಿಸಿದರು. ಏನು ಬಂತೋ ಆ ಕೃಶಾಂಗಿಗೆ. ಯಾವ ಆವೇಶ ಮೂಡಿತೋ. ಧಟ್ಟಂತ ಅವನನ್ನು ಅನಾಮತ್ತು ಎತ್ತಿಬಿಟ್ಟು ಹೆಗಲಮೇಲೆ ಹಾಕಿಕೊಂಡು ರಂಗದ ಪಕ್ಕಕ್ಕೆ ಜಗ್ಗು ಹಾಕುತ್ತಾ ಹೊರಟು ಹೋದಳು.

೬ ವರ್ಷದ ಹುಡುಗನಾಗಿದ್ದಾಗ ನಮ್ಮಜ್ಜಿ, ಪಕ್ಕದ ಮನೆಯ ಮೂರು ವರ್ಷದ ಪಾಪುವನ್ನು ಕಂಡು, " ಲೋ ! ಹುಷಾರಾಗಿರೋ, ಬಲು ಚೂಟಿ ಪಾಪು, ಗಂಡನ್ನ ಬುಟ್ಟೀಲಿ ಹಾಕ್ಕೊಂಡು ಹೆಗಲಮೇಲೆ ಇರಿಸಿ, ಸಂತೆಗೆ ಹೋಗಿ ಮಾರಿಕೊಂಡು ಬಂದುಬಿಡುತ್ತಾಳೆ " ಅಂತ. ಮೂರು ವರ್ಷದ ಪಾಪು ಅಲ್ಲ ಈಕೆ. ೨೩ ಮೀರಿದ, ಮಾತು ಆಡದ ಮಹಿಳೆ. ಅವನು ಗಂಡನೋ ಅಲ್ಲವೋ ನನಗೆ ತಿಳಿಯದು. ಆದರೆ ಗಂಡಸು ಅಂತ ಖಚಿತವಾಗಿ ಸುಲಭವಾಗಿ ಗೊತ್ತಾಗಿತ್ತು. ಅವನನ್ನು ಅನಾಮತ್ತು ಎತ್ತಿ ಹೆಗಲಮೇಲೆ ಹಾಕಿಕೊಂಡು ಹೋದ ಜೋರು ನೋಡಿದರೆ, ನೇರ ಸಂತೆಗೆ ಹೋಗಿ, ಅಜ್ಜಿ ಹೇಳಿದ ಹಾಗೆ ಮಾರಿಕೊಂಡು ಬರುತ್ತಾಳೇನೋ ಅಂದು ಕೊಂಡೆ.

ಹೊಸ ಹರುಷ

ಹಳೆಯು ವರುಷ ಕಳೆದು ಹೋಗಿ ಹೊಸ ವರುಷ ಬಂತೆಂದು ಸಂತೋಷಪಡುವ ಉದ್ಯಮದಲ್ಲಿ ವಿಶ್ವದಾದ್ಯಂತ ವಾಸಿಸುವ ಎಲ್ಲ ಮೂರ್ಖರೂ ಸಮಭಾಗಿಗಳು. "ಹೊಸ ವರುಷ ನಿಮಗೆ ಹೊಸ ಹರುಷ ತರಲಿ" ಎಂದೇ ಎಲ್ಲರೂ ಎಲ್ಲರಿಗೂ ಶುಭಾಶಯಗಳನ್ನು ಕಳುಹಿಸಿದರೂ, ಅವರಿಂದ ಆಗುವುದು ಅಷ್ಟರಲ್ಲೇ ಇದೆ. ನಾಲಿಗೆಯ ತುದಿಯ ಅಥವಾ ಕಾಗದದ ಮೇಲಿನ ಶುಭಾಶಯದಲ್ಲಿ ಇನ್ನೆಷ್ಟುಮಟ್ಟಿನ ಬಲವಿದ್ದೀತು !

" Butto is an ass ! "
(we know it !)
with best compliments from
Mao to Sukarno

ಎಂಬ ಶುಭಾಶಯ ಪತ್ರ ಒಂದು ವೇಳೆ ಇದ್ದರೂ ಅದು ಭುಟ್ಟೋ ಕೈಗೆ ಸಿಗುವ ಸಂಭವವಿಲ್ಲ.

ಹಾಗೆ ಹೇಳಬೇಕೆಂದರೆ, ಪರಿಸ್ಥಿತಿಯ ನಿಜವಾದ ಅರಿವು ಸಹದೇವನಿಗಿತ್ತು.

" ನಿತ್ಯಂ ಸನ್ನಿಹಿತೋ ಮೃತ್ಯುಃ "

ಎಂದಾತನು ಸಹಸ್ರಾರು ವರ್ಷಗಳ ಕೆಳಗೇ ಹೇಳಿದರೂ ಅದನ್ನು ಗಮನಕ್ಕೆ ತಂದುಕೊಂಡವರು ಬಹಳ ಕಡಿಮೆ ಜನ.

ಕಳೆದ ವರ್ಷ ವಿಶ್ವನಾಯಕರೆಲ್ಲರ ಶುಭಕಾಮನೆ ಹೊತ್ತು, ವರ್ಷಾರಂಭದಲ್ಲಿ ಕಾಲಿಟ್ಟ ಭಾರತಕ್ಕೆ ಸಿಕ್ಕುದೇನು ? ಯುದ್ಧ, ಬರ, ಜಲಕ್ಷಾಮ. ಭರ್ತ್ಸನೆ. ನಾವು ಆಹಾರ ಸಮಸ್ಯೆ ಬಗೆಹರಿಸುತ್ತೇವೆ ಎಂದವರು ಮಳೆ ತರಲಿಲ್ಲ. ಕಂಟ್ರೋಲ್, ಕಳ್ಳ ಸಾಗಣಿಕೆ. ಗಗನಕ್ಕೇರಿದ ಬೆಲೆಗಳನ್ನು ತಂದರು.

ಮಳೆಯುಂ ಮೇಣ್ ಸಮೃದ್ಧಿಯುಂ
ಬೆಳೆಯುಂ ನರ್ಚಿದ್ದೆನವುಗಳ್ ಆಹವಕೋಲಾ
ಹಳದೊಳ್ ಅದಾವುದೊ
ಛಲದೊಳದೆತ್ತಲೋ ಪೋದವು......

ಎಂದು ಹಳಹಳಿಸಿ ಸುಬ್ರಹ್ಮಣ್ಯರು
ಮಡಿಗುಮೆ ಬರವೆಮ್ಮಿಂದಂ
ಮಡಿಗುಂ ಮೇಣ್ ಶೌರ್ಯಶಾಲಿ ಒಕ್ಕಲುಂ ತನದಿಂ
ಮಡಿಗುಂ,.........

ಎನ್ನುತ್ತಿದ್ದವರು ತಲೆ ತಗ್ಗಿಸಿ ಪರಾಭವವನ್ನು ಸ್ವೀಕರಿಸಿ ಅಮೆರಿಕದತ್ತ ನಡೆದರು.

ಆಪತ್ತಿಗೆ ಆಗುವ ನಂಟರನ್ನು ನಂಬುವುದೆಂತು ಎಂದು ಹಲವು ಮಂದಿ ಕೇಳುತ್ತಿದ್ದರು. ಈ ಆಪತ್ತನ್ನು ತಲೆಯಮೇಲೆ ತಂದುಕೊಂಡ ನಮ್ಮನ್ನು ಯಾರು ತಾನೇ ನೆಚ್ಚಬಹುದು ಎಂದವರು ಯೋಚಿಸುತ್ತಿಲ್ಲ.

ಕೋಟಿಗಟ್ಟಲೆ ಟನ್ನುಗಳಷ್ಟು ಧಾನ್ಯ. ಕೋಟಿಗಟ್ಟಲೆ ರೂಪಾಯಿಗಳಷ್ಟು ಸಾಲಗಳೇನೋ ಬರುತ್ತಿದ್ದರೂ, ಅವುಗಳ ಅವಶ್ಯಕತೆಯಿರುವ ಜನರ ಮೂಲಭೂತ ಸಮಸ್ಯೆಗಳು ಯಾವುವು ಎಂದು ಕೇಳುವವರೇ ಇಲ್ಲ.

ಕ್ರಾಂತಿಯಿಂದ ಫಲ ದೊರೆತೀತು ಎಂಬ ಭ್ರಮೆ ಕೆಲವರಿಗಿದೆ. ಆದರೆ ಫ್ರಾನ್ಸ್ ದೇಶದ ಮಹಾ ಕ್ರಾಂತಿಯಿಂದ ಹಿಡಿದು ಚೀಣಾ, ಕ್ಯೂಬಾ, ಈಜಿಪ್ಟ್ ಇಂಡೋನೇಷಿಯಾಗಳಲ್ಲಿ ನಡೆದ ಕ್ರಾಂತಿಗಳವರೆಗೆ ಯಾವ ಕ್ರಾಂತಿಯೂ ಜನತೆಗೆ ಸುಖಸಂತೋಷ ತಂದಿಲ್ಲವೆಂಬುದನ್ನು ಅವರು ಮರೆತಿದ್ದಾರೆ.

ಆದುದರಿಂದ ಜಲಕ್ಷಾಮ, ಯುದ್ಧಭೀತಿ, ಆಹಾರಾಭಾವ ಬೆಲೆಗಳ ಏರಿಕೆಗಳ ಕಾಟ ನಿಮಗೆ ಆದಷ್ಟು ಕಡಿಮೆಯಾಗಲೆಂದು ನಾವು ಪ್ರಾರ್ಥಿಸುತ್ತೇವೆ. ನೀವೂ ಹಾಗೆ ಮಾಡಿ ಎಂಬುದು ನಾವು ನಿಮಗೆ ನೀಡಬಹುದಾದ ಅತ್ಯಂತ ದೊಡ್ಡ ಶುಭಾಶಯ.

"ಜೀವನವು ದುಃಖಮಯ. ಆಶೆಯೇ ದುಃಖದ ಮೂಲ. ಪ್ರಾಪಂಚಿಕ ಸುಖದ ಆಸೆಯನ್ನು ಬಿಡುವುದೇ ನಿರ್ವಾಣಕ್ಕೆ ಹಾದಿ" ಎಂಬ ಶುಭಾಶಯವನ್ನು ನೀಡಬೇಕೆಂದಿದ್ದೆವು. ಆದರೆ ಅದು ನಮ್ಮ ಸ್ವಂತದ್ದಲ್ಲ ಬೇರೊಬ್ಬರು ಈ ಮೊದಲೇ ಹೇಳಿದ್ದಾರೆಂಬ ಸುದ್ದಿ ಇತ್ತೀಚೆಗೆ ತಿಳಿದುಬಂದಿದೆ.

* * * *

ಈ ಜೀವನದಲ್ಲಿ ಸುಖವು ಮರುಮರೀಚಿಕೆಯೆಂದೇ ಈ ಮೇಲೆ ಹೇಳಿದಂತಾಯಿತು. ಹಾಗಾದರೆ ನಿರಾಶಾವಾದದ ಮಡಿಲಲ್ಲಿ ನಾವಿದ್ದೇವೆ ಎಂದು ಭಾವಿಸಬಾರದು. ಆಶಾವಾದವು ದುಃಖವನ್ನಲ್ಲದೆ ಸುಖವನ್ನು ನೀಡಲಾರದು ಎಂದು ಹೇಳುತ್ತಿದ್ದೇವೆ ಅಷ್ಟೇ. ಇದಕ್ಕೂ ಮುಂದೆ ನಾವು ದಿವಂಗತ ತ್ರಿವೇಣಿಯವರನ್ನು ನೆನೆಯಬೇಕಾಗಿದೆ. ತಿಳಿನಗೆಯ ಮಾಸಪತ್ರಿಕೆಯಲ್ಲಿ ವೇದಾಂತದ

ಮುಂದ್ದೆಗಳನ್ನು ವಿವೇಚನೆ ಮಾಡುವುದು ಪ್ರಸ್ತುತವಲ್ಲವೆಂದು ಅವರೊಮ್ಮೆ ದೂರಿದ್ದರು. ಅದು ಇನ್ನೂ ನಮ್ಮ ನೆನಪಿನಲ್ಲಿದೆ.

ಮೊದಲೇ ಹೇಳಿದಂತೆ ಜೀವನವು ದುಃಖಮಯವೆಂದು ನಾವು ಒಪ್ಪಿದಾದರೆ ಅದು ಸುಖಮಯವಾಗುವಂತೆ ಮಾಡುವ ಪುರುಷ ಪ್ರಯತ್ನವನ್ನು ಅಲ್ಲಗಳೆದ ಹಾಗಾಗುತ್ತದೆ. ಪುರುಷಪ್ರಯತ್ನದ ಒಂದು ಲಕ್ಷಣವೆಂದರೆ, ನಾವು ಅದನ್ನು ಅಲ್ಲ ಗಳೆದರೂ ಬಿಟ್ಟರೂ ಅದು ಅವ್ಯಾಹತವಾಗಿ ನಡದೇ ಇರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮುಂಗಿಲುಹಳ್ಳಿಗೆ ನೀರನ್ನೊದಗಿಸಲು ಕಳೆದ ನಲವತ್ತು ವರ್ಷಗಳಿಂದ ಲೂ ಪ್ರಯತ್ನ ಸಾಗುತ್ತಿದೆ. ಒಂದು ತಗಡಿನ ಟ್ಯಾಂಕ್ ಇದ್ದಾಗ ಎಷ್ಟು ನೀರು ಬರುತ್ತಿತ್ತೋ, ಆರು R. C. C. ಟಾಂಕುಗಳಿರುವ ಈಗಲೂ ಅಷ್ಟೇ ಬರುತ್ತಿದೆ. ಪುರುಷ ಪ್ರಯತ್ನದ, ಈ ನವ್ಯ ಯಜ್ಞದ ಫಲವಾಗಿ ಈಗ ಎರಡು ಮೂರು ತಿಂಗಳು ಗಳಿಂದಲೂ ನಲ್ಲಿ ಪೂರಾ ಬಂದ್ ಆಗಿ ಹೋಗಿದೆ.

ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ನಗರಾಡಳಿತವು ಕೊಡುತ್ತಿದೆ. ಒಂದು–ನಾಗರಿಕರ ಸಂಖ್ಯೆ ಹೆಚ್ಚುತ್ತಿದೆ, (ಎಂದರೆ ನಾಗರಿಕರು ನೀರನ್ನು ಬಯಸ ಬಾರದು) ಎರಡು-ಮಳೆ ಕಡಿಮೆಯಾಗಿ ನದಿ ಒಣಗಿ ಹೋಗಿದೆ.

*   *   *   *

ಮುಂಗಿಲುಹಳ್ಳಿಯು ಈ ರೀತಿ ಹಿಂದೆ ಬೀಳುವುದನ್ನು ತೀವ್ರವಾಗಿ ಖಂಡಿಸು ತ್ತಿದ್ದಾರೆ–ಪ್ರೊ. I. G. K. ಅಮೇರಿಕಾವಾಲಾ. ಅವರು ಹೇಳುವುದನ್ನು ಕೇಳಿದರೆ ನಾವೆಲ್ಲಾ ಬದುಕಿರುವುದು ವ್ಯರ್ಥ ಎನ್ನಿಸುತ್ತದೆ. ಪ್ರೊ. G. T. ರಷ್ಯಾವಾಲಾ. ರವರೂಹಾಗೇ ಹೇಳುತ್ತಾರೆ. ರಷ್ಯದಲ್ಲಿ ಭೂಮಿಯೆಲ್ಲಾ ಸ್ವರ್ಗವಾಗಿದೆಯಂತೆ. ರಷ್ಯಾದಲ್ಲಿ ಜವಾನನಿಗೆ ಬರುವಷ್ಟು ಸಂಬಳ ನಮ್ಮಲ್ಲಿ ಪ್ರೊಫೆಸರರಿಗೂ ಬರುವುದಿಲ್ಲ ವಂತೆ. ರಷ್ಯಾ, ಮತ್ತು ಅಮೇರಿಕಾಗಳಲ್ಲಿ ಜವಾನರಿಗಿರುವಷ್ಟು ಬುದ್ಧಿ ನಮ್ಮಲ್ಲಿ ವಿಲಾಯತಿಗೆ ಹೋಗಿ ಬಂದವರಿಗೆ ಉಂಟೇ ಇಲ್ಲವೇ ಎಂದು ಪ್ರೊ. ಅಮೇರಿಕಾವಾಲಾ ಮತ್ತು ರಷ್ಯಾವಾಲರನ್ನು ಕೇಳಿದಾಗ 'ಇಂತಹ ಮಡ್ಡಿಗಳಿಗೆ ಏನು ಹೇಳುವುದು ? ಎಂದರು.

ಪ್ರೊ. ಅಮೇರಿಕಾವಾಲರು ಹೇಳಿದಂತೆ ಅಮೇರಿಕಾದಲ್ಲಿ ಕಳ್ಳರಿಗಿರುವಷ್ಟು ಸಂಪತ್ತು ನಮ್ಮದೇಶದಲ್ಲಿ ಸಾಹುಕಾರರಿಗೆ ಇಲ್ಲಿ. ಅವರು ಈವರ್ಷಾಂತ್ಯ ಸಮಾ ರಂಭವೊಂದರಲ್ಲಿ ತಮ್ಮ ಅನುಭವಗಳನ್ನು ಹೇಳಿ ಹೊರಕ್ಕೆ ಬಂದರು. ಅದಿನ ಸೋಮವಾರ. ಆದುದರಿಂದ ಹೋಟೆಲುಗಳೆಲ್ಲಾ ಬಾಗಿಲು ಮುಚ್ಚುತ್ತಿದ್ದವು. ಅವರೊಡನಿದ್ದ ಪ್ರೊ. ರಷ್ಯಾವಾಲರು, ಲೆನಿನ್‌ಗ್ರಾಡ್ ನಗರದಲ್ಲಿ ರಷ್ಯನ್ನರು ಆಹಾರವಿಲ್ಲದೆ ವರ್ಷಗಟ್ಟಲೆ ಹೇಗೆ ಯುದ್ಧಮಾಡಿದರು; ಅವರ ಕರ್ತವ್ಯದೃಷ್ಟಿ ಎಷ್ಟು ಹಿರಿಯದು ಎಂದು ಹೇಳುತ್ತಾ ಬಾಗಿಲುಮುಚ್ಚುತ್ತಿದ್ದ ಹೋಟೆಲೊಂದರೊಳಕ್ಕೆ

ಓಡಿಹೋದರು, ಅವರ ಮನೆಯಲ್ಲಿ ನಾವೂ ನುಗ್ಗಿದೆವು. ರಷ್ಯಾವಾಲರು ಆರು ದೋಸೆಗಳನ್ನೂ, ಅಮೆರಿಕಾವಾಲರು ಏಳುದೋಸೆಗಳನ್ನೂ ತಿಂದರು. ನಾವು ಬರಿ ಕಾಫಿ ಕುಡಿದು ತೃಪ್ತರಾದೆವು. ಅಮೆರಿಕಾವಾಲರಿಗೆ ದೋಸೆ ಬಿದ್ದಮೇಲೆ ಸ್ಫೂರ್ತಿ ಏರಿತು.

“ಯಾತರ ಊರು ಇದು, ಇಪ್ಪತ್ತೈದು ವರ್ಷಗಳ ಕೆಳಗೆ ಹೇಗಿತ್ತೋ ಇಂದೂ ಹಾಗೇ ಇದೆ. ಸ್ವಲ್ಪವೂ ಮುಂದುವರಿದಿಲ್ಲ. ”ಎಂದರು. ಹಿರೋಷಿಮಾ, ಬರ್ಲಿನ್‌ಗಳು ನಾಲ್ಕಾರೇ ವರ್ಷಗಳಲ್ಲಿ ಹೇಗೆ ಬೆಳೆದವು ಎಂದು ವರ್ಣಿಸಿದರು. ನಮ್ಮವರು ಮುಕುಂದಿಣ್ಣೆಗಳು ಎನ್ನುತ್ತಾ ಹೋಟೆಲಿನಿಂದ ಹೊರ ಹೊರಟರು. ಆಗ ಆರೂಕಾಲು ಗಂಟೆಯಾಗಿತ್ತು.

ನಾನು “ ಇಲ್ಲ ಸ್ವಾಮಿ ನಮ್ಮ ಊರು ಮುಂದುವರಿಯುತ್ತಿದೆ ” ಎಂದೆ.

ಈ ಊರಿನ ಹಾಳು ಹಣೇಬರ ನನಗೆ ಗೊತ್ತಿಲ್ಲವೇನ್ರೀ ಯಾತರ ಮುಂದುವರಿಯಾವಾಟ ” ಎಂದು ಹೇಳುತ್ತಾ ಅಮೇರಿಕಾವಾಲರು ರಸ್ತೆಗಿಳಿದರು.

ನಮ್ಮೂರು ಅಮೆರಿಕಾವಾಲರ ಮೇಲೆ ಸಿಟ್ಟಾಯಿತೋ ಏನೋ? ಹಿಂದಿನಿಂದ ಬಂದ ಸೈಕಲ್ ಒಂದು ಅವರನ್ನು ನೆಲಕ್ಕೆ ಕೆಡಹಿತು, ಅದನ್ನು ಸವಾರಿ ಮಾಡುತ್ತಿದ್ದವಳು ಒಬ್ಬ ಸುಂದರ ತರುಣಿ. ಅಮೆರಿಕಾವಾಲರು “ ಬಸವ, ಬಸವ, ಅಯ್ಯಯ್ಯೋ ಸತ್ತೇ ” ಎಂದು ಚೀರಿದರು. ಸುತ್ತಲೂ ಒಂದು ಗುಂಪು ಘೇರಾಯಿಸಿತು. ಅದರಲ್ಲಿ ನಮ್ಮೂರಿನ ಕವಿಗಳಾದ ರಾಂಜಿಯವರೂ ಇದ್ದರು. ಅವರು ಹೀಗೆಂದು ಕವನವೊಂದನ್ನು ಸೈಕಲ್ ಸವಾರಿಣಿಗೆ ಹೇಳತೊಡಗಿದರು.

ನೀನು ರಂಭೆ ನೀನೂರ್ವಶಿ
ನೀನು ಮನ್ರೊ ನೀ ಸಾಧನ
ಮುಂಗಿಲುಹಳ್ಳಿ ವೈಜಯಂತಿ
ನಿಟ್ಟುವಳ್ಳಿಯಾ ಜಯಂತಿ
ಕಂಟ್ರಾಕ್ಟರ ಕೊನೆಯ ಬಿಲ್ಲೇ
ಎಂಜಿನಿಯರ ಪರ್ಸೆಂಟೇ
ಸಚಿವವರರ T. A. D. A.
ಪ್ರೇಮ ಮಂಟಪದ ಬೆಲೂನ್
ನೀನು ಶುದ್ಧ ಪಾಲಿಥೀನ್

(ಈ ಪದ್ಯವನ್ನು ಇಷ್ಟರಲ್ಲಿಯೇ ಪೂರ್ಣ ಪಾಠ ಹಾಗೂ ಟಿಪ್ಪಣಿಗಳೊಡನೆ ರಾಂಜಿಯವರು ಪ್ರಕಟಿಸಲಿದ್ದಾರೆ) ಜನತೆಯು ಕಾಲು ತುಳಿತಕ್ಕೆ ಸಿಕ್ಕ ಅಮೆರಿಕಾವಾಲರು ಮೈ ಕೊಡವುತ್ತಾ ಎದ್ದುನಿಂತಾಗ ಗುಂಪು ಕವಿಗಳ ಕವನವನ್ನು ಪ್ರಚಂಡ ಚಪ್ಪಾಳೆಯೊಡನೆ ಸ್ವಾಗತಿಸಿತು.

"ನಮ್ಮ ಊರು ಏಕೆ ಮುಂದುವರಿದಿಲ್ಲ ?" ಎಂದು ನಾನು ಕೇಳಿದ್ದಕ್ಕೆ ಪ್ರೊಫೆಸರರು ಉತ್ತರ ಹೇಳಲಿಲ್ಲ.

ಬ್ರಾಡ್ವೇಯಲ್ಲೊಂದರಲ್ಲೇ ನಾಟಕವಿರುವುದು ಎಂದು ಭಾವಿಸಿದ್ದ ಅಮೆರಿಕಾ ವಾಲರನ್ನು ಅಂದುರಾತ್ರಿ ನಮ್ಮೂರಿನ ಥಿಯೇಟರ್ ಫೆಂಟ್ಯಾಸ್ಟಿಕ್ಕಿಗೆ ಕರೆದುಕೊಂಡು ಹೋದೆವು. ಒಂಟೇ ಹಾಳು ಶ್ರೀ ಶ್ರೀ ತೋಟದ ಮೂಲೆ ಕಪ್ಪಡ ಸ್ವಾಮಿ ಕೃಪಾ ಪರಿಪೋಷಿತ ನಾಟ್ಯ ಸಂಘದ 'ಮಾನ ಬಿಟ್ಟ ಮಂಗ' ನಾಟಕದ ಮುನ್ನೂರನೇ ಹಾಗೂ ಕೊನೇ ಯಶಸ್ವೀ ಪ್ರಯೋಗ ಅಂದು ನಡೆದಿತ್ತು. ಕನ್ನಡ ರಂಗಭೂಮಿ ಹಿಂದೆ ಬಿದ್ದಿಲ್ಲವೆಂದು ಮತ್ತೆ ಹೇಳಬೇಕೆ ? ಅಮೆರಿಕಾವಾಲರು ಸಂಜೆಯ ಅನುಭವ ವನ್ನು ಇನ್ನೂ ಮರೆತಿರಲಿಲ್ಲ ವೇನೋ; ಸುಮ್ಮನಿದ್ದರು. ಸುಮಾರು ಎಂಟುನೂರು ಜನ ಹಿಡಿಯುವ ಥಿಯೇಟರಿನಲ್ಲಿ ಅಂದು ಮೂರುಸಾವಿರ ಜನಸೇರಿದ್ದರು. ಟಿಕೆಟ್ಟಿನ ದರವನ್ನು ದುಪ್ಪಟ್ಟು ಮಾಡಲಾಗಿತ್ತು.

ನಾಟಕ ಇನ್ನೇನು ಆರಂಭವಾಗಬೇಕು 'ಅಯ್ಯೋ ಕರೆಂಟು ಹೊಡೀತು ಸತ್ತೇ' ಎಂದು ಒಬ್ಬನು ಕೂಗಿದ, ಲೈಟುಗಳೆಲ್ಲಾ ಆರಿದವು. ಒಳಗಿದ್ದವರು ಹೊರಕ್ಕೂ, ಹೊರಗಿದ್ದವರು ಒಳಕ್ಕೂ ನುಗ್ಗಿದರು. ಕಾಲುಗಳು ತರೆದವು. ನಿಂತವರು ನೆಲಕ್ಕೆ ಬಿದ್ದರು, ಬಾಗಿಲುಗಳು ಸಿಕ್ಕಲೇ ಇಲ್ಲ, ಹೆಂಗಸರೂ ಮಕ್ಕಳೂ ಚೀರಿದರು. ಸಹಸ್ರಾರು ಗ್ರಾಂ ಭಂಗಾರದ ಒಡವೆಗಳು ಕಳವಾದುವು.

ಅಮೆರಿಕಾವಾಲರ ಪಾದ ಪಲ್ಲಟವಾಗಿ, ಅವರು ಭೂಶಯನಮಾಡಿದರು. ಹನ್ನೊಂದೂ ಮುಕ್ಕಾಲು ಗಂಟೆಗೆ ಬೆಳಕು ಬಂದಾಗ. ನಾನೂ ಅವರೂ ಥೇಟರಿನೊಳಗೇ ಇದ್ದೆವು.

ಪ್ರೊಫೆಸರರು "ನಾವು ಮುಂದುವರಿಯುತ್ತಿದ್ದೇವೆ !" ಎಂದು ಗಂಭೀರವಾಗಿ ಉಚ್ಚರಿಸಿದರು.

ನಾನು "Come with me. I shall show you fear in a handful of dust." ಎಂದೆ.

ಪ್ರೊಫೆಸರರು "ಗುಣಕ್ಕೆ ಮತ್ಸರವೇ" ಎಂದರು.

* * * *

ಆದುದರಿಂದ ನಾವು ಹೊಸವರುಷ ಇನ್ನೂ ಎಂತೆಂತಹ ಹರ್ಷಗಳನ್ನು ತರುವುದೋ ಹೇಳಲಾರೆವು. ತೆಪ್ಪಗಿದ್ದು ಬಂದಿದ್ದನ್ನು ಅನುಭವಿಸುತ್ತಾ ಹೋಗಬೇಕೆಂದು ತೀರ್ಮಾನಿಸುತ್ತೇವೆ; ನಮ್ಮ ಪರಮೇಶಿ ಹೇಳಿದಂತೆ.

"ಎಲ್ಲರಿಗಾದ್ದು ನಮಗಾಕ್ಕತೆ ಬಿಡ್ಲೇ ರಾಯ" ಎಂದುಕೊಂಡು ಧೈರ್ಯ ತಳೆದಿದ್ದೇವೆ.

ಅ. ರಾ. ಸೇ.

ಕೌಪೀನ ಸಂರಕ್ಷಣಾರ್ಥಂ

ಬೇಲಿ ಮೇಲೆ ಹರಡಿದ್ದ ಕೌಪೀನವನ್ನು ನೋಡಿದ, ಸಂನ್ಯಾಸಿ. "ಅಯ್ಯೊಯ್ಯೋ" ಅಂತ ಬಾಯಿ ಬಡಿದುಕೊಂಡ, "ಒಂದು ಕೌಪೀನ ಮೈಮೇಲೆ. ಒಂದು ಒಗೆದು ಒಣಗಿ ಹಾಕಿರೋದು. ಇಷ್ಟೇ ನನ್ನ ಇಹಲೋಕದ ಆಸ್ತಿ. ಅಂತಹ ಕಡುಬಡವ ನಾನು. ಒಣಗಿಹಾಕಿದ್ದ ಕೌಪೀನವನ್ನು ಇಲಿಯೋ ಹೆಗ್ಗಣವೋ ಕಡಿದು ಬಿಟ್ಟಿದೆಯಲ್ಲಾ! ತೂತುಮಾಡಿ ಬಿಟ್ಟಿದೆಯಲ್ಲಾ!" ಎಂದು ಮಮ್ಮಲ ಮರುಗಿದ ಸಂನ್ಯಾಸಿ. ಈ ಇಲಿ ಹೆಗ್ಗಣಗಳ ಶಿಕಾರಿ ಮಾಡಲೇ ಬೇಕು. ಇಲ್ಲದೆ ಇದ್ದರೆ ನಿರ್ಮಲ ಮನಸ್ಸಿನಿಂದ ಭಗವಂತನ ಧ್ಯಾನಮಾಡುವುದಕ್ಕಾಗುಲ್ಲ, ಮನಸ್ಸೆಲ್ಲಾ ಕೌಪೀನದ ಮೇಲಿರುತ್ತೆ ಎಂದು ಮೂಲ ಭೂತ ಸತ್ಯವನ್ನು ಕಂಡ. ಅದಕ್ಕೇ ಬೆಕ್ಕನ್ನು ಸಾಕಲು ಪ್ರಾರಂಭಿಸಿದ. ಸಂನ್ಯಾಸಿಯ ಸಂಸಾರ ಆಗ ಶುರುವಾಯಿತು: ಬೆಕ್ಕಿಗೆ ಹಾಲು = ಹಾಲಿಗೆ ಹಸು = ಹಸುವಿಗೆ ಹೋರಿ = ಇತ್ಯಾದಿ.

ಈ ಕತೆ ಜ್ಞಾಪಕಕ್ಕೆ ಬಂತು, ನಮ್ಮ ಕಾರ್ಪೊರೇಷನ್ನಿನ, ಆಡಳಿತ ವರದಿಯ ಮೇಲಿ ಟೀಕೆಗಳಾದಾಗ. "ಇಲಿಗಳು ದವಸ ಧಾನ್ಯಗಳನ್ನು ಮುಕ್ಕಿಬಿಡುತ್ತವೆ. ಪ್ಲೇಗು ಮತ್ತಿತರ ಖಾಯಿಲೆಗಳನ್ನು ಹರಡುತ್ತವೆ. ಆದ್ದರಿಂದ ಅವುಗಳ ಯಜ್ಞ ಮಾಡಬೇಕು" ಎಂದು ಕಾರ್ಪೊರೇಷನ್ ನಿರ್ಣಯಿಸಿತು. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿತು. ಕೆಲವು ಇಲಿಗಳನ್ನೂ ಹಲವು ಹೆಗ್ಗಣಗಳನ್ನೂ ಹಿಡಿದು ತಿಥಿ ಮಾಡಿತು. ಕಡೆಗೆ ಸರಾಸರಿ ಖರ್ಚು:—ಒಂದು ಇಲಿಯ ಶಿಕಾರಿಗೆ ಐವತ್ತು ರೂಪಾಯಿ!! ೫೦!! —ಅಬ್ಬಾ!

ಕೌಪೀನ ಸಂರಕ್ಷಣಾರ್ಥಂ ಸನ್ಯಾಸಿ ಮಾಡಿದ ಯೋಜನೆಗೂ, ನಮ್ಮ ಕಾರ್ಪೊರೇಷನ್ ಸಾಧಿಸಿದ ಮಹಾ ಶಿಕಾರಿಗೂ ತುಂಬಾ ಹೋಲಿಕೆ ಇದೆ. ಆದರೆ ಒಂದು ಗೂಢವಾದ ಗಾಢವಾದ ವ್ಯತ್ಯಾಸವೂ ಇದೆ.

ಸನ್ಯಾಸಿಯ ಯೋಜನೆಯನ್ನು ಅವನೇ ಹೂಡಿದ. ಬೆಕ್ಕು ಹಸು ಹೋರಿ ಒಂದಾಗುತ್ತಲೊಂದು ಸರಪಣಿ ಪೋಳಿಸಿದಂತೆ ಬಂದುವು.

ಆದರೆ ಕಾರ್ಪೊರೇಷನ್ನಿನ ಯೋಜನೆಯಲ್ಲಿ ಹಾಗಿರಲಾರದು. ಇಲಿ ಹೆಗ್ಗಣ ಶಿಕಾರಿ ಮಾಡುವ ಮಹಾಯಾಗದಲ್ಲಿ, ಇಲಿ ಹೆಗ್ಗಣಗಳೇ ಋತ್ವಿಕ್ಕುಗಳು,—ಇಲಿ ಹೆಗ್ಗಣಗಳು ಸರಪಣಿ ಪೋಣಿಸಿದಂತೆ ಈ ಯಾಗದಲ್ಲಿ ಪಾತ್ರವಹಿಸಿರಬೇಕು!

—ಬಚ್ಚ

ರಸೀತಿ

ಹೂವಿನಪೇಟೇಲಿ ಗಿರವಿ ಅಂಗಡೀನ ಸಾಬೂತ್‌ಮಲ್ ಮೊದಲು ತೆಗೆದಾಗ, ಇಲ್ಲಿ ಇವನಿಗೇನು ವ್ಯಾಪಾರ ಆಗುತ್ತೆ ಅಂತ ಜನ ಅಂದು ಕೊಂಡಿದ್ದುಂಟು. ಆದರೆ ದೀಪಾವಳಿ ಹಬ್ಬದಹೊತ್ತಿಗೆ, ಅಂದರೆ ಏಳೇ ತಿಂಗಳ ಅವಧಿಯಲ್ಲಿ, ಅವನ ಹತ್ತಿರ ೧೨೦ ಗಿರಾಕಿಗಳಿದ್ದರು. ೮೦೦ ಗಿರವಿ ವಸ್ತುಗಳನ್ನಿಟ್ಟುಕೊಂಡು ಅವ ಸಾಲಕೊಟ್ಟಿದ್ದ. ಇಷ್ಟೆಲ್ಲಾ ಯಶಸ್ಸಿಗೆ ಅವನು ದಳ್ಳಾಳಿಯಾಗಿ ನೇಮಿಸಿಕೊಂಡ ತಿಮ್ಮರಾಯೀನೇ ಕಾರಣ.

“ಶೇಕಡಾ ೨ ರಂತೆ ಕಮಿಷನ್ ಕೊಡ್ತೀನಿ, ಗಿರಾಕಿಗಳನ್ನು ಒದಗಿಸಿಕೊಡೋದು ಆಮೇಲೆ ವಸೂಲಿಮಾಡೋದು ಇವು ನಿನ್ನ ಕೆಲಸ” ಅಂತ ಸಾಬೂತ್‌ಮಲ್ ಹೇಳಿದಾಗ, ಭೇಷಕ್ ಅಂತ ತಿಮ್ಮರಾಯಿ ಒಪ್ಪಿದ, ಮೂರುತಲೆಮಾರಿನಿಂದ ಸಂಪಾದಿಸಿಟ್ಟಿದ್ದ ಆಸ್ತಿಯನ್ನೆಲ್ಲಾ ತಿಮ್ಮರಾಯಿ ಎಂಟೇ ವರ್ಷಗಳಲ್ಲಿ ಉಢಾಯಿಸಿಬಿಟ್ಟಿದ್ದ. ಅಂದಮೇಲೆ ಅವನ ಪರಿಚಯವಿದ್ದವರ ಸಂಖ್ಯೆ ಬಹಳ ಎಂದು ಹೇಳಬೇಕೆ ? ಪೆಟ್ಟು ತಿಂದಿದ್ದ ತಿಮ್ಮರಾಯಿ ಸಾಬೂತ್‌ಮಲ್ ಇನ ಏಜೆಂಟಾದಾಗ ತುಂಬಾಸಾಧುವಾಗಿಬಿಟ್ಟಿದ್ದ. ದುಡಿದು ಕೆಲಸಮಾಡುತ್ತಿದ್ದ. ಬಂದ ಕಮಿಷನ್ ಊಟ ಬಟ್ಟೆಗೆ ಸಾಕಾಗುತ್ತಿತ್ತು.

ಮೂರೀಗೆಬಿಟ್ಟ ಗೂಳಿ ತರಹ ಇದ್ದ ತಿಮ್ಮರಾಯಿ ಈಗ ಗಾಣದಎತ್ತಿನ ತರಹ ಪರಿವರ್ತನೆ ಹೊಂದಿದ್ದನ್ನು ಕಂಡು ದೇವರಿಗೆ ಸಂತೋಷವಾಯ್ತು. ಬಡವರಮೇಲೆ ದೇವರು ದಯೆ ಮಾಡಿದರೆ, ಆಗೋ ಫಲಿತಾಂಶ ಗೊತ್ತಲ್ಲ! ಮೂರು ಮಕ್ಕಳು ಸಾಲಾಗಿ ಆಯ್ತು. ಡಾಕ್ಟರೇನೋ ಹೇಳಿದ್ದುಂಟು ತಿಮ್ಮರಾಯಿ ಪ್ರಾಯದಲ್ಲಿ; “ಅಯ್ಯಾ ನಿನಗೆ ಬಂದಿರೋ ರಮಾರಮಿ ರೋಗಗಳಿಂದ ಇನ್ನುಮೇಲೆ ನೀನು ಬೃಹನ್ನಳೆಯಂತೇ ಬಾಳಬೇಕು ಅಂತ. ಆದರೆ ಬಡತನ ಬಡಿದಾಗ ಹಳೆಯತಪ್ಪುಗಳೆಲ್ಲ ಅಳಿಸಿ ಹೋದಂತಾಯಿತು. ತಿಮ್ಮರಾಯಿ ತಂದೆಯಾದ, ಮೊದಲ ಮಗು ಗಂಡು, ಮಿಕ್ಕೆರಡು ಹೆಣ್ಣು. “ನಾನು ಬಾಳಿನಲ್ಲಿ ಕೆಟ್ಟುಹೋದಹಾಗೆ ಈ ಮಗನನ್ನು ಕೆಡುಕ್ಕೆ ಬಿಡಬಾರದು. ಬಾಲ್ಯದಿಂದಲೇ ಬುದ್ಧಿ ಕಲಿಸಬೇಕು” ಎಂದು ತಿಮ್ಮರಾಯಿ ಮಗನ ಐದನೆ ಹುಟ್ಟಿದ ಹಬ್ಬದ ದಿನ, ವಿದ್ಯಾಭ್ಯಾಸಕ್ಕೆ ಪ್ರಾರಂಭಿಸಿದಾಗ ಪ್ರತಿಜ್ಞೆತೊಟ್ಟ.

ಈ ಪ್ರತಿಜ್ಞೆಯನ್ನು ಕೇಳಿ ಸಂತೋಷದಿಂದ ದಿಗ್ಭ್ರಾಂತಳಾದ ಹೆಂಡತಿ ಕಣ್ಣುಮುಚ್ಚಿದಳು. ತಿಮ್ಮರಾಯಿ ಆ ಮುಂದೆ ಮಕ್ಕಳಿಗೆ ತಂದೆಯೂ ಹೌದು, ತಾಯಿಯೂ ಆದ.

ಮಗ ಮಾದೇವನಿಗೆ ತಾನು ಗಿರಿವಿ ಅಂಗಡಿಯಲ್ಲಿ ಕಲಿತಿದ್ದ ವಿದ್ಯೆಯನ್ನೆಲ್ಲಾ ಕಲಿಸಿದ. ಯಾವಯಾವ ವಸ್ತುಗಳನ್ನು ಯಾವಯಾವ ದರ ಬಡ್ಡಿಹಾಕಿ ಗಿರಿವಿಗೆ ಇಟ್ಟು ಕೊಳ್ಳಬೇಕು ? ಗಿರಿವಿ ಇಟ್ಟುಕೊಳ್ಳುವಾಗಲೇ ಆದ್ಮಿ ಹಿಂತಿರುಗಿ ಬಂದು ಬಿಡಿಸಿಕೊಳ್ಳುವಹಾಗಿದ್ದಾನೆಯೋ ? ಅಥವಾ ತಿರುಗಿ ತಿರುಗಿ ಗಿರಿವಿ ಇಡುಕ್ಕೆ ಮೇಲೆ ಮೇಲೆ ಬರುತ್ತಾನೋ ಇದನ್ನು ಅರಿಯುವ ವಿಧಾನ. ಅನಂತರ ಅವ ಗಿರಿವಿ ಬಿಡಿಸಿ ಕೊಳ್ಳುವುದಿಲ್ಲ ಎಂದು ನಂಬಿಕೆ ಬಂದರೆ, ಕೂಡಲೆ ಆ ಮಾಲನ್ನು ಯಾವ ಅಂಗಡಿಯಲ್ಲಿ ಹೇಗೆ ಮಾರ್ಪಡಿಸಿ ಮಾರುವುದು, ಸಾಮಾನುಗಳನ್ನು ಕೊಟ್ಟರೆ. ಕೊಡುವ ಮೊದಲೇ ರಸೀತಿಯನ್ನು ಬರೆಸಿಕೊಂಡೇ ಕೊಡಬೇಕು, ಇತ್ಯಾದಿ ವ್ಯಾಪಾರದ ಸೂಕ್ಷ್ಮಗಳನ್ನೆಲ್ಲಾ ಮಗನಿಗೆ ಕಲಿಸಿದ.

ತಿಮ್ಮರಾಯಿಯ ಪ್ರಾಯದ ಆಟಗಳೆಲ್ಲಾ ಮಗ ಮಾದೇವನ ಮೆದುಳಿಗೆ ತಟ್ಟಿತ್ತೋ ? ಅಥವಾ ಪ್ರಕೃತಿಯಲ್ಲಿ ಆಗಿಂದಾಗ್ಯೆ ಕಾಣಿಸಿಕೊಳ್ಳುವ ಮಂಕುತನ ಮಗನಿಗೆ ಬಡಿದಿತ್ತೋ, ಅಥವಾ ಮೂರು ವರ್ಷದ ಮಗುವಾಗಿದ್ದಾಗ ಸಾಬೂತ್ ಅಂಗಡಿಯ ಹೊಸಲಿನ ಮೇಲೆ ಎಡವಿಬಿದ್ದಾಗ, ತಲೆಗೆ ಅಘಾತವಾಗಿತ್ತೋ. ದೇವರೇ ಬಲ್ಲ. ಆದರೆ ಇದು ಮಾತ್ರ ಖಂಡಿತವಾಯ್ತು. ಹೇಳಿದ್ದು ಮಾಡುವಷ್ಟುಮಾತ್ರ ಬುದ್ದಿ ಇತ್ತು ಮಾದೇವನಿಗೆ. ತಾನಾಗಿ ಯೋಚಿಸಿ ಏನಾದರೊಂದು ಕೆಲಸಮಾಡುವಷ್ಟು ತಲೆ ಇರಲಿಲ್ಲ. ಅಂದಮೇಲೆ ಮಾದೇವ, ತಿಮ್ಮರಾಯಿ ಕಲಿಸಿದ್ದನ್ನೆಲ್ಲಾ ಚೆನ್ನಾಗಿ ಕಲಿತ. ಹೀಗೆಮಾಡು ಅಂತ ಹೇಳಿದ್ದನ್ನು ಮಾಡ್ತಾ ಇದ್ದ. ಆದರೆ ಯಾಕೆ ಹೀಗೆ ಮಾಡಬೇಕು ಅಂತ ಅವನಿಗೆ ಹೊಳೆಯುತ್ತಿರಲಿಲ್ಲ.

ಇಷ್ಟು ಬುದ್ಧಿ ಇದ್ದೋರು ನಮ್ಮ ದೇಶದಲ್ಲಿ ಸುಖವಾಗಿ ಬಾಳ್ತಾ ಇಲ್ಲವೇ ? ಕಾರಖಾನನಿಂದ ಕರ್ನಲ್‌ವರೆಗೆ, ಜವಾನ್ ಗಿರಿಯಿಂದ ದಿವಾನ್‌ಗಿರಿವರೆಗೆ, ಪಂಚಾಯ್ತಿಯಿಂದ. ಮಂಡಲದವರೆಗೆ. ಎಲ್ಲೆಲ್ಲಿ ನೋಡಿದರೂ ಮಾದೇವನ ತರಹ ತಡೆದ ಬುದ್ಧಿ ಮೋಜು ಜೀವನ ನಡೆಸ್ತಾಇಲ್ಲವೇ ?

ಹಾಗೇ ಮಾದೇವನೂ ಬಾಳಿಕೋತಾನೆ ಅಂತ ತಿಮ್ಮರಾಯಿಗೆ ಸಮಾಧಾನ. ಮಾದೇವ ಬೆಳೆದ. ದೊಡ್ಡವನಾದ. ಸಾಬೂತ್‌ಮಲ್ ಅಂಗಡೀಲಿ ಮರಿ ಏಜಂಟಾದ. ಲೆಕ್ಕ ರಸೀತಿ ಬರೆಯೋದನ್ನೆಲ್ಲಾ ಚೆನ್ನಾಗಿ ಕಲಿತ. ತಂದೆ ಹೇಳಿದ ಹಾಗೆ ಭಾರೀ ಮೀಸೇನೂ ಬಿಟ್ಟ. ಗಿರ್ಕಿ ಛಡಾವನ್ನೂ ಮೇಟ್ಟಿದ. “ ಮೀಸೆ ಭರ್ಜರಿಯಾಗಿದ್ದರೆ ಗಿರಾಕಿ ಹೆದರ್ತಾನೆ, ಮಗ ! ಛಡಾವು ಗಿರ್ರಾಯಿಸಿದರೆ, ಸಾಲದ ವಸೂಲಿ ಸುಲಭ

ಆಗ್ತದೆ" ಎಂದು ತಿಮ್ಮರಾಯಿ ಹೇಳಿದ್ದೇನೋ ಉಂಟು. ಆದರೆ ಮಾದೇವನಿಗೆ ಅರ್ಥವಾಯಿತೋ ಇಲ್ಲವೋ ಭಗವಂತ ಬಲ್ಲ. ಮುಖದಲ್ಲೇನೋ ಅರ್ಥವಾದ ಕಳೆ ಕಾಣಿಸಲಿಲ್ಲ.

ಇಷ್ಟರ ಮಧ್ಯೆ ಮಾದೇವನ ಮೊದಲ ತಂಗೀಗೆ ಮದುವೆಯಾಗಿತ್ತು. ಸಾಬೂತ್‌ಮಲ್ ಈ ಮದುವೆ ಸೂಚಿಸಿದ್ದ. "ತಿಮ್ಮರಾಯೀ ತಿಪಟೂರಿನಲ್ಲಿ ನನ್ನ ಸಂಬಂಧಿ ಒಂದು ಗಿರಿವಿ ಅಂಗಡಿ ಇಟ್ಟಿದ್ದಾನೆ. ಅವನ ಅಂಗಡೀಲಿ ಕಮಿಷನ್ ಏಜಂಟಾಗಿ ಇದಾನೆ, ತುಂಬಾ ದಿನದಿಂದ ತಿಳಿಯೋದು, ಒಳ್ಳೆ ಸಭ್ಯಸ್ಥ. ಅವನ ಮಗ ಮದುವೆಗೆ ಸಿದ್ಧನಾಗಿದ್ದಾನೆ. ಕೊಟ್ಟು ಮದುವೆ ಮಾಡು." ಎಂದು ಹೇಳಿದ್ದ. ರಜ ಕೊಟ್ಟು ತಿಮ್ಮರಾಯೀನ ತಿಪಟೂರಿಗೆ ಕಳಿಸಿದ್ದ. ಸಾಬೂತ್‌ಮಲ್ ಮತ್ತು ಅವನ ಸಂಬಂಧಿ ಒಪ್ಪಿದರು. ತಿಮ್ಮರಾಯಿ ಸುಬ್ಬರಾಯಪ್ಪ ಒಪ್ಪಿದರು. ಇನ್ನು ಹುಡುಗ ಹುಡುಗೀನ ಯಾರು ಕೇಳ್ತಾರೆ ? ಮದುವೆ ಆಯಿತು.

ಒಂದು ತಿಂಗಳಾದ ಮೇಲೆ ಹುಡುಗಿಯನ್ನು ತಿಪಟೂರಿನ ಗಂಡನ ಮನೆಗೆ ಕಳಿಸಬೇಕಾಗಿತ್ತು. ಅದೇ ಹೊತ್ತಿಗೆ ಸರ್ಕಾರ ಘೋಷಿಸಿತು. ಇನ್ನೆರಡು ವರ್ಷಗಳಲ್ಲಿ ಐದು ಲಕ್ಷ ಟನ್ ಧಾನ್ಯ ಬೆಳೀತೀವಿ ಅಂತ. ಈ ಘೋಷಣೆ ಕೇಳಿ ಬರೋ ಮಳೆಯೂ ನಿಂತುಹೋಯಿತು. ಜನರೆಲ್ಲ ದಿನಸಿ ಅಂಗಡಿ ಬಾಗಿಲಿನಲ್ಲಿ ಕ್ಯೂ ಕಾಯುಕ್ಕೆ ಶುರು ಮಾಡಿದರು. ಕ್ಯೂ ಕಾಯ್ತಾ ೨ ಗಂಟೆ ನಿಂತಾಗ, ಪತ್ರಿಕೆಗಳಲ್ಲಿ ಘೋಷಣೆಗಳನ್ನು ಓದಿ, ಮುಂದೆ ಸವಿಯಬಹುದಾದ ಪರಮಾನ್ನ ಪಾಯಸವನ್ನು ಊಹಿಸಿಕೊಂಡು ಹಿಗ್ಗುತ್ತಿದ್ದರು. ಅಂದಮೇಲೆ ಹೊಟ್ಟೆ ಹೆಚ್ಚು ಚುರು ಚುರು ಆದಾಗ, ಇದ್ದ ಬದ್ದು ದನ್ನು ಗಿರವಿ ಅಂಗಡೀಲಿ ಒತ್ತೆ ಇಟ್ಟು, ಕಾಳಪ್ಪನ ಸಂತೇಗೆ ಹಗಲಲ್ಲೇ ಹೋಗಿ, ಕೇಳಿದ್ದು ಕೊಟ್ಟು, ಕೊಟ್ಟಿದ್ದನ್ನು ಇಸುಕೊಂಡು ಬಂದು ತಿನ್ನುತ್ತಿದ್ದ ಕಾಲ, ಸಾಬೂತ್‌ಮಲ್ ಅಂಗಡೀಲಿ ಸಂತೆ ತರಹ ಮಂದಿ ಗಿರವಿ ಇಡುಕ್ಕೆ ಬರುತ್ತಿದ್ದರು ಮಗಳನ್ನು ಕರಕೊಂಡು ತಿಮ್ಮರಾಯಿ ಹೋಗುವ ಹಾಗಿರಲಿಲ್ಲ.

ಕಡೆಗೆ ಮಾದೇವನೇ ತಂಗಿಯನ್ನು ಕರೆದುಕೊಂಡು ಹೋಗಬೇಕೆಂದೂ, ತಿಪಟೂರಿನ ಮಾವನ ಮನೆಯಲ್ಲಿ ಬಿಟ್ಟು ಬರಬೇಕೆಂದೂ ತೀರ್ಮಾನವಾಯಿತು. ಮಾದೇವ ಜವಾಬ್ದಾರಿ ಕೆಲಸ ವಹಿಸಿಕೊಂಡು ಮಾಡುತ್ತಿದ್ದುದು ಇದೇ ಮೊದಲು. ತಾನು ಕಲಿತಿದ್ದ ವಿದ್ಯೆಯೆಲ್ಲವನ್ನೂ ಮೆಲಕು ಹಾಕಿ, ತಿಪಟೂರಿಗೆ ತಂಗಿಯೊಡನೆ ಹೋದ, ಮಾವನ ಮನೆಯಲ್ಲಿ ತಂಗಿಯನ್ನು ಬಿಟ್ಟ. ಔತಣದ ಊಟ ಮಾಡಿದ. ಸಂಜೆ ರೈಲಿಗೆ ಹೋಗಬೇಕು, ಆಗ ಕಾಗದ ಒಂದನ್ನು ಭಾವನ ಎದುರಿಗೆ ಇಟ್ಟ. ಇಲ್ಲಿ ಸಹಿ ಹಾಕಿ ಮಾಲು ಸಂದಿದೆ ಅಂತ ಅಂದ. [ಸುಬ್ಬರಾಯಪ್ಪನವರೂ ಸಾಕ್ಷಿ ಹಾಕಲಿ ಎಂದ- ಅಪ್ಪ ಹೇಳಿದ್ದಾರೆ ರಸೀತಿ ಇಸುಕೊಂಡೇ ಮಾಲು ಒಪ್ಪಿಸಬೇಕು ಅಂತ. ತಂದೆ

ಮಾತು ತೆಗೆದುಹಾಕಬಾರದು ಎಂದು ನೀತಿ ಹೇಳಿದ. ಭಾವ ಬೇಗ ಇಬ್ಬರೂ ಮಾದೇವ ತಂದಿಟ್ಟ ರಸೀತಿಗೆ ಸಹಿ ಹಾಕಿದರು. ಪೆಂಗನ ಮುಂದೆ ವಾದಿಸಿ ಪ್ರಯೋಜನವೇನು ?

ಮಾದೇವ ರಸೀತೀನ ಭದ್ರವಾಗಿ ಹಿಡಿದುಕೊಂಡು ಊರಿಗೆ ಹಿಂತಿರುಗಿದ, ಸಾಬೂತ್‌ಮಲ್ ಕೈಲಿ ರಸೀತಿ ಕೊಟ್ಟ. ಅವನಿಗೆ ಕನ್ನಡ ಬರಲ್ಲ, ಅವನು ಅದನ್ನು ತಿಮ್ಮರಾಯಿ ಕೈಲಿ ಕೊಟ್ಟು ಓದು ಎಂದ. ಓದುತ್ತಾ ತಿಮ್ಮರಾಯಿ ಅಂದುಕೊಂಡ " ಮಾದೇವ ಬೆಳೆದ. ಹೇಳಿದ ಕೆಲಸ ಮಾಡ್ತಾನೆ. ತಲೆ ಇಲ್ಲದೆ ಇದ್ದರೂ ಹೇಗೋ ಬಾಳ್ತಾನೆ " ಅಂತ.

ಮುದಿ ಮುಂದಿ ಮುಂದ್ದಿ ಸಿಂಗಾರ ಮಾಡ್ಕೊಂಡು
ನಡೀತಿದ್ಳು ಪಾರ್ಕಲ್ಲಿ, ಎದೆ ಮುಂದ್ಮಾಡ್ಕೊಂಡು
ಹಿಂದೆ ಬಂತು ತೋಳ,
ಹಿಡೀತವಳ ತೋಳ.
" ಅಯ್ಯೋ ! ಮುದುಕಿ " ಅಂತ ಓಡ್ತು ; ಕೈ ಬಿಟ್ಕೊಂಡು.

*   *   *   *

ರೆಂಬೆ ಮೇಲೆ ಕೂತಿದ್ದ ಕೋತಿ ಒಂದು
ಮಕ್ಕಳು ಮರಿಗಳ ಆಟ ನೋಡಿ ಅಂತು
" ಹೀಗೆಲ್ಲಾ ನೀವ್ ಎಗರಾಡಿದರೆ
ಮುಂದೆ ನಿಮಗೆ ನೆಲವೆ ಗತಿ.
ಹೊಟ್ಟೆಪಾಡಿಗೆ ಮನಸಿನ ಬುಗುರಿ
ಆಡಿಸ್ಬೇಕು ಗಂಗೋತ್ರೀಲಿ. "

*   *   *   *

ವ್ಯಾಕರಣಿ ವಾಸು ಬಿಸಿಲಮುಚ್ಚಿನಮೇಲೆ
ಹರಿಣಿ ಜತೆ ಕುಳಿತಿದ್ದ, ಬೆಳದಿಂಗಳು, ಮೇಲ್ಕೆ
ಏಸು ಚಂದ ಬೆಳದಿಂಗಳಾ !
ಎಂದು ಹರಣಿ ಅಂದಳಾ.
ಓದುಕ್ಕಾಗಲ್ಲವಲ್ಲ ಎಂದ, ಮುಂಕುದಿನ್ನೆ.

ಕರೆಯೋಲೆಗೆ ಮರು ಓಲೆ

ಓ ನೇಹಿಗ ರಾಮನಾಥ,
ಒಪ್ಪಿಸಿಕೊ ಈ ನನ್ನ ಕಬ್ಬ ಗೀತ
ಯುದ್ಧಭಯ, ಅನ್ನಕ್ಷಯ ಅನಾವೃಷ್ಟಿ,
ಈ ಮಧ್ಯೆ ಕೇಳಿಸಿತು ನಿನ್ನ ಮದುವೆಯಾ ಸುದ್ದಿ !
ಗೆಳೆಯ ಕುರಿಯೊಂದು, ಬಿತ್ತು ಹಳ್ಳಕೆ, ಎಂದು ತೃಪ್ತಿಗೊಂಡೆ,
ಮುಂದೆ ನೀ ಪಡುವ ಭವಣೆಗಳ ನೆನೆಸಿಕೊಂಡೆ.

ಓ, ಬಾಲ ಬ್ರಹ್ಮಚಾರಿ ! ಇನ್ನಾರು ನೀಡುವರು ನಿನಗೆ ಪ್ರಶ್ಟಿಗುಂಡ್ಡೆ ?
ಸಂಗ್ರಾಸ ಭೋಜನ ದಕ್ಷಿಣೆಗಳ ಕಳಕೊಂಡೆ ಪೆದ್ದ !
ಇನ್ನಾವಹೆಣ್ಣು ನಾಚುವಳು, ಬಳುಕುವಳು ನಿನ್ನ ಮುಂದೆ ?
ಈಗ ಮುಗಿಯಿತು ನಿನ್ನ ಕಥೆ, ಸೇರಿದೆ ನೀ ಕುರಿಮಂದೆ !

" ಗೀತಾಮಂಡಳಿಯು " ಸ್ವಾಗತ ಭೀಷಣಕಾರ,
ಇನ್ನು ಒದಗಿತು ನಿನ್ನ ಭಾಷಣಕೆ ಸಂಚಕಾರ !
ಕಿವಿತೆರೆದು ಕೂಡಬೇಕು ಪತ್ನಿಯ ಮುಂದೆ,
ನಾಲಗೆ ಸುರುಟುವುದು, ಬಾಯಿ ಮುಚ್ಚುವುದು, ಇನ್ನುಮುಂದೆ !

ಈಗ ನನಗಿರುವುದು ಒಂದೇ ಚಿಂತೆ,
ಭೂಮಿ ತಡೆಯುವುದೇ ನಿನ್ನ ಕಾಣಿಕೆಗೆ ವರ್ಷಕೊಂದರಂತೆ ?
ಕ್ಷಾಮಡಾಮರ, ನಿರುದ್ಯೋಗ, ಭಾರತದ ಸಮಸ್ಯೆ,
ನಿನ್ನ ಸಂತಾನ ಶ್ರೀ ಒಡ್ಡದೆ ಪ್ರಬಲ ಸಮಸ್ಯೆ ?

ಎಂತಾದರು ಸರಿಯೇ ಹಸನಾಗಲಿ ನಿನ್ನಬಾಳು,
ನಿನ್ನ ಮೆಚ್ಚಿನಾ ಮಡದಿಗೆ ನನ್ನ ಪ್ರಣಾಮವನು ಹೇಳು.

—ಕೆ. ಎನ್. ಕಿಟ್ಟನ್

ಹೆಂಡತಿ ಹಾಗೂ ಬೆಕ್ಕು

ಆ ಇಬ್ಬರು ಆಪ್ತಗೆಳೆಯರು ಅನೇಕ ವರ್ಷಗಳ ನಂತರ ಪುನಃ ಭೇಟಿಯಾಗಿದ್ದರು. ಮೊದಲನೆಯವ ಕಟ್ಟುಮಸ್ತಾಗಿ ಬೆಳೆದಿದ್ದ—ವಿಶಾಲವಾದ ಎದೆ, ಉಬ್ಬಿದ ದವಡೆ, ಕೋರೈಸುವ ಗೋಲಿ ಕಣ್ಣುಗಳು. ಅವನ ಬಾಯಿ, ಮುಖಕ್ಕೆ ಅಡ್ಡಲಾಗಿ ಸೀಳಿದಂತಿತ್ತು. ಒಳ್ಳೆ ಬೇಟೆನಾಯಿಯ ಹುಮ್ಮಸ್ಸು ಆತನಿಗೆ. ಎರಡನೆಯವ ಕ್ಷಯಿಸಿದ್ದ. ಅವನ ಭುಜ ಬಾಗಿತ್ತು. ಕೈಕಾಲುಗಳು ದೇಹಕ್ಕೆ ಅಂಟಿಸಿದಹಾಗಿತ್ತು. ಅವನದು ನಿರಾಶೆಯ ಅುಜುಬುರುಕ ಮುಖ

ಮೊದಲನೆಯವ ಕುಶಲ ಪ್ರಶ್ನೆಮಾಡುತ್ತಾ "ಏನಯ್ಯ, ಆಗ್ಲೂ ಈಗ್ಲೂ ಈ ಪಾಟಿ ಸೊರಗಿದೀ. ನೆಲದ ಮೇಲೆ ನಿನ್ನ ನೆರಳು ಕೂಡ ಬೀಳುಲ್ಲ. ಯಾಕೆ, ಮೈಯಲ್ಲಿ ಸ್ವಸ್ಥವಿಲ್ಲವೇ? ನೌಕರಿಯಲ್ಲಿ ಏನಾದರೂ ತೊಡಕೇ? ಅಥವಾ ಸಂಸಾರದಲ್ಲಿ ಸುಖವಿಲ್ಲವೇ? ಎಂದು ಅರ್ಥವತ್ತಾಗಿ ಕೇಳಿದ. ಪೋಲೀಸಿನವರು ಗುಮಾನಿಯಿರುವ ಆಸಾಮಿಯನ್ನು ಪರೀಕ್ಷಿಸುವ ಹಾಗೆ ತನ್ನ ಸ್ನೇಹಿತನನ್ನು ನೋಡಿದ.

"ನನ್ನ ಕಥೆ ಯಾಕಯ್ಯ ಕೇಳುತ್ತೀ?" ಎರಡನೆಯವ ಗೋಗರೆದ. "ಯಾವುದೋ ಒಂದು ವಿಷಗಳಿಗೆಯಲ್ಲಿ ಅವಳನ್ನು ಮದುವೆಯಾಗಿ ಸಿಕ್ಕಿ ಬಿದ್ದೆ. ಈಗ ಅನುಭವಿಸುತ್ತಾಯಿಂದೀನಿ, ನನ್ನ ಲಗಾಮು ಹೆಂಡತಿ ಕೈಯಲ್ಲಿದೆ." ಎಂದ.

"ಏನು, ನಿನ್ನ ಹದ್ದುಬಸ್ತಿನಲ್ಲಿಲ್ಲವೇ ಅವಳು?" ಮೊದಲನೆಯವ ಆಶ್ಚರ್ಯ ಚಕಿತನಾಗಿ ಕೇಳಿದ.

"ಆದದ್ದು ಆಗಿ ಹೋಯ್ತು ಬಿಡಯ್ಯ. ಈಗ, ನಿನ್ನನ್ನು ನೋಡಿದರೆ ಸಂತೋಷವಾಗುತ್ತೆ. ಒಳ್ಳೇ ಅಖಂಡವಾಗಿ ಬೆಳೆದಿದ್ದೀಯೆ. ನಿನ್ನ ಮೈ ಸುಖವುಂಡಿದೆ. ನಿನ್ನ ಸಂಸಾರದಲ್ಲಿ ನೆಮ್ಮದಿಯಿಂದ್ದಹಾಗೆ ಕಾಣುತ್ತೆ. ಹೆಂಡತಿಯನ್ನು ಎದುರಿಸುವ ದಿಟ್ಟತನ ನಿನಗೆ ಹೇಗೆ ಬಂತು? ಇದರ ಗುಟ್ಟೇನು? ಎಂದು ಮರು ಪ್ರಶ್ನೆಹಾಕಿದ ಎರಡನೆಯವ.

"ಓಹ್ ಅದೇನಯ್ಯ ಮಹಾ!" ಮೊದಲನೆಯವ ಭುಜಹಾರಿಸುತ್ತಾ ಹೇಳಿದ. "ನೋಡು. ಮದುವೆ ಆದ ಮೊದಲನೇ ರಾತ್ರಿ ನಾನು, ನನ್ನ ಹೆಂಡತಿ ಊಟಕ್ಕೆ ಕುಳಿತಿದ್ದೆವು. ಖುಷಿಖುಷಿಯಾಗಿ ಏನೇನೋ ಸವಿ ಮಾತುಗಳನ್ನಾಡಿದ್ದೆವು. ಇದ್ದಕಿದ್ದ ಹಾಗೆ ಒಂದು ಬೆಕ್ಕು ಊಟದ ಮೇಜಿನ ಮೇಲೆ ಹಾರಿ, ಪಾತ್ರೆಯೊಳಗೆ ಗಬಕ್ಕನೆ ಬಾಯಿ ಹಾಕಿತು, ನಾನು ಹಿಂದುಮುಂದು ನೋಡದೆ, ಕೈಯಲ್ಲಿದ್ದ ಚಾಕುವಿನಿಂದ ಆ ಬೆಕ್ಕನ್ನು ಅಲ್ಲೇ ತುಂಡರಿಸಿದೆ. ರಕ್ತಪಾತವಾಯಿತು. ನನ್ನ ಹೆಂಡತಿ ತತ್ತರಿಸಿದಳು. ಅವಳ ಮುಖ ಬಿಳಿಚಿಕೊಂಡಿತು. ಆಗಿದ್ದು ಇಷ್ಟೇ ನೋಡು. ಅಂದಿನಿಂದ ನಾನು ಹಾಕಿದ ಗೆರೆ ದಾಟಿಲ್ಲವಯ್ಯ ಅವಳು" ಎಂದ ಅವ, ಎದೆಯನ್ನು ಮುಂದೆ ಮಾಡಿ.

ಎರಡನೆಯವನ ಕಣ್ಣುಗಳಲ್ಲಿ ಹೊಳಪು ಕಾಣಿಸಿತು. ಅವನು ತನ್ನ ಸ್ನೇಹಿತನನ್ನು ಬಹುವಾಗಿ ಮೆಚ್ಚಿಕೊಂಡ. ಅವನಿಗೆ ಅನೇಕ ಧನ್ಯವಾದಗಳನ್ನರ್ಪಿಸಿ, ರೈಲಿನಿಂದ ತನ್ನೂರಿಗೆ ಹಿಂದಿರುಗಿದ.

ಊರಿಗೆ ಬಂದವನೆ ಒಂದು ಮುದ್ದಾದ ಬೆಕ್ಕನ್ನು ಕೊಂಡು ಮನೆಗೆ ತಂದ. ಹೆಂಡತಿಯ ಕಣ್ಣು ಮರೆಸಿ, ಆಬೆಕ್ಕಿಗೆ ತಿಂಡಿ ತಿನಿಸು ಕೊಟ್ಟು ತಾಕೀತುಮಾಡಿದ. ಅದರ ಅಲ್ಪಾಯುಷ್ಯವನ್ನು ಯೋಚಿಸಿಕೊಂಡು ಮರುಗಿದ.

ರಾತ್ರಿ, ಅವನ ಹೆಂಡತಿಯೊಡನೆ ಊಟಕ್ಕೆ ಕುಳಿತಾಗ, ಆ ಬೆಕ್ಕು ತನ್ನ ಯಜಮಾನನನ್ನು ಕಂಡು, ಊಟದ ಮೇಜಿನ ಮೇಲೆ ಕುಪ್ಪಳಿಸಿತು; ಪಾತ್ರೆಯಲ್ಲಿ ಬಾಯಿ ಹಾಕಿತು. ಅತಿ ಕೋಪವನ್ನು ಪ್ರದರ್ಶಿಸುತ್ತಾ ಅವನು ಕೈಯಲ್ಲಿದ್ದ ಚಾಕುವನ್ನು ಮೇಲೆತ್ತಿದ. ಕಣ್ಣರಳಿಸಿ, ತನ್ನ ಹೆಂಡತಿಯನ್ನು ಒಂದು ಬಾರಿ ಕೆಕ್ಕರಿಸಿ ನೋಡಿದ. ಆದರೆ, ಅವನ ಹೆಂಡತಿಗೇನು ಅಂಜಿಕೆಯೇ? ಅವನ ಪೌರುಷದ ಪರಿಚಯ ಅವಳಿಗಿಲ್ಲವೇ? ಅವಳು ತನ್ನ ಗಂಡನ ಕೈಯಲ್ಲಿದ್ದ ಚಾಕುವನ್ನು ಸರಕ್ಕನೆ ಕಿತ್ತು ಕೊಂಡು, ಅದರ ಹಿಡಿಯಿಂದ ಅವನ ತಲೆಯ ಮೇಲೊಂದು ಕೊಟ್ಟಳು. "ಮೂರ್ಖ" ಎಂದು ಹೀಯಾಳಿಸಿದಳು, ಅವನ ಹುಟ್ಟಡಗಿಸಿದಳು.

ಪಾಠ ;—ಮೊದಲ ರಾತ್ರಿಯೇ ಬೆಕ್ಕನ್ನು ಕೊಲ್ಲು, ಹೆಂಡತಿಯನ್ನು ಗೆಲ್ಲು.

—ದತ್ತ

ಮೊದಲೆಲ್ಲಾ ಕೇಳ್ತಿದ್ರು
ಹೆಣ್ಣಿನ ಮೇಲೆ ಏನ್ ಒಡವೆ ಅಂತ.
ಈಗೆಲ್ಲಾ ಕೇಳ್ತಾರೆ
ಹೆಣ್ಣು ತೊಟ್ಟಿದ್ದಾಳೆ? ಮಂಕಿ! ಅಂತ

ಚಿನ್ನಾಚಾರಿ

ಚೆಲುವಾಚಾರಿಯ ಮಗ ಚಿನ್ನಾಚಾರಿ ತನ್ನ ಕುಲಕಸಬನ್ನು ಬಿಡಲಿಲ್ಲ. ಕಷ್ಟವೋ ನಿಷ್ಠೂರವೋ ಹಿರಿಯರು ಇಟ್ಟಿದ್ದ ಅಗ್ಗಿಷ್ಟಿಕೆ ಊದುಕೊಳವೆ ಹಾಗೂ ಚಿನ್ನ ಕರಗಿಸುವ ಮೂಸೆಯಲ್ಲೇ ತನ್ನ ಜೀವಿತವನ್ನು ಕಂಡುಕೊಳ್ಳಬೇಕೆಂದು ಪಟ್ಟುಹಿಡಿದು, ಸರ್ಕಾರದ ಕಾನೂನಿಗೆ ಸವಾಲುಹಾಕಿ ಕುಳಿತಿದ್ದ. ಚಿನ್ನ ನಿಯಂತ್ರಣಕ್ಕೆ ಮೊದಲೂ ಅವನ ಬಿಸಿನೆಸ್ಸು ತಣ್ಣಗೆ ಇತ್ತು. ಆಗೊಮ್ಮೆ ಈಗೊಮ್ಮೆ ಯಾರಾದರೊಬ್ಬರು ಬೆಳ್ಳಿ ಕಡಗವೋ, ಚಿನ್ನದ ಬಳೆಯೋ ಮಾಡಿಸಿದರೆ ಅದೇ ಹೆಚ್ಚು. ಪಿತ್ರಾರ್ಜಿತವಾದ ನಾಲ್ಕು ಅಂಕಣದ ಒಂದು ಮನೆ, ನಾಲೆಕೆಳಗಿದ್ದ ಎರಡೇ ಎಕರೆಗದ್ದೆ, ಇವೇ ಅವನ ಸಂಸಾರ ರಥವನ್ನು ನೂಕುವುದರಲ್ಲಿ ಸಹಾಯಕವಾಗಿತ್ತೆಂದು ಅನೇಕರು ನಂಬಿದ್ದರು. ಚೆಲುವಾಚಾರಿಗಾದರೂ ಆಗಾಗ ಒರೆಹಚ್ಚಲು ಗಿರಾಕಿಗಳಿಂದ ಚಿನ್ನವಾದರೂ ಸಿಕ್ಕುತ್ತಿತ್ತು. ಆದರೆ ಚೆಲುವಾಚಾರಿ ಸತ್ತು, ಚಿನ್ನಾಚಾರಿ ಅಗ್ಗಿಷ್ಟಿಕೆ ಮುಂದೆಕೂತಾಗ, ಒರೆಹಚ್ಚುವುದಕ್ಕೆ ಹಿತ್ತಾಳೆ ಸಿಗದಹಾಗೆ ಆಯಿತು ಇಂತಹ ಬಿಗಡಾಯಿಸಿದ ಪರಿಸ್ಥಿತಿಯಿರುವಾಗಲೇ ಚಿನ್ನದ ನಿಯಂತ್ರಣವೂ ಜಾರಿಗೆ ಬಂತು. ಇನ್ನು ಚಿನ್ನಾಚಾರಿ ಸತ್ತ ಎಂದೇ ಮುಳ್ಳೂರಿನ ಜನ ತಿಳಿದರು.

ಅನೇಕಮಂದಿ ಹಳೇ ಪೇಪರ್ ಕಾಲಿಸೀಸೆ ಸಾಬರುಗಳು, ಅವನ ಅಗ್ಗಿಷ್ಟಿಕೆ, ಊದುವ ಕೊಳವಿಯನ್ನು ನ್ಯಾಯವಾದ ಬೆಲೆಗೆ ಕೊಳ್ಳುವುದಾಗಿಯೂ ತಿಳಿಸಿದರು. ಆದರೆ ಚಿನ್ನಾಚಾರಿ ಆಗಲೂ ಪಟ್ಟುಹಿಡಿದ. "ಹೆಂಡತಿಯ ತಾಳಿ ಮಾರಿದರೂ ಸರಿ, ನಾನು ಅಗ್ಗಿಷ್ಟಿಕೆಯನ್ನು ಮಾರಲಾರೆ" ಎಂದು ಘಂಟಾಘೋಷವಾಗಿ ಸಾರಿದ. ಅವನ ಮಾವ ಸಿಂಗ್ರಾಚಾರಿ ಅಳಿಯನಿಗೆ ಬುದ್ಧಿ ಹೇಳಿದ." ನಮ್ಮ ಕಸುಬಿನಮ್ಯಾಕೆ ಸರ್ಕಾರದೋರು ಖಾರ ಅರದವ್ರೆ. ಬ್ಯಾರೆ ಜೀವ್ನೋಪಾಯ ನೋಡ್ಕೋದಿದ್ರೆ ಗಂಜಿಗೆ ಗತಿಯಿಲ್ಲದಹಾಗೆ ಆಗೋಯ್ತದೆ. ನೀನು ಸತ್ತ್ರೂ ಎಂಡ್ತಿ ಮಕ್ಕಳನ್ನ ನೌಯಿಸ್ ಬ್ಯಾಡ್ದು..." ಅಂತ ಬುದ್ಧಿ ಹೇಳಿದರು. ಚಿನ್ನಾಚಾರಿ ಮಾವನ ಎದುರಿಗೆ ಊಗುಟ್ಟಿದ. ಆದರೆ ಮನಸ್ಸಿನಲ್ಲೇ ಒಂದು ನಿರ್ಧಾರಕ್ಕೆ ಬಂದ. ಹಿರಿಯರ ಆಸ್ತಿಯಾದ ಅಗ್ಗಿಷ್ಟಿಕೆಯಲ್ಲೇ ತನ್ನ ಜೀವನವನ್ನು ರೂಪಿಸಿಕೊಂಡು ಉನ್ನತಸ್ಥಿತಿಗೆ ಬರಬೇಕೆಂದು ತೀರ್ಮಾನಿಸಿದ.

ಮಾರನೇ ದಿನವೇ ಅವನ ಮನೆಯಿಂದ ಬೋಂಬಾಯಿ ಬೋಂಡಾದ ಘಮಘಮಿಸುವ ವಾಸನೆ ಊರಿನಲ್ಲೆಲ್ಲಾ ಹರಡಿತು. ಚಿನ್ನಾಚಾರಿ ಬೋಂಡಾ ಪ್ರಸಿದ್ಧಿಗೆ ಬರಲು ತಡವಾಗಲಿಲ್ಲ. ಹತ್ತಾರುಜನ ಬಂದರು. ಬೋಂಡಾ ವ್ಯಾಪಾರವೂ ಕತ್ತಲಲ್ಲೇ

ಸಾಗಿತು. ಬೋಂಡಾ ಬೇಕಾದವರು ಒಂದು ವಾರದ ಮೊದಲೇ ಚಿನ್ನಾಚಾರಿಗೆ ಹೇಳಿ ಒಂದು ವಾರದ ನಂತರ ಬಂದು ತೆಗೆದುಕೊಂಡು ಹೋಗಬೇಕಾಗಿತ್ತು. ಚಿನ್ನಾಚಾರಿಯೂ ಒಂದು ಕುಳವಾದ. ಭಾರಿ ಕುಳವೇ ಆದ. ಮದುವೆ ಮುಂಜಿ ಸೀಸನ್ನುಗಳಲ್ಲಿ ಊರೂರಿಂದ ಜನರು ಬರಲು ಪ್ರಾರಂಭವಾಯಿತು. ಮೇಗರ ಹಳ್ಳಿ ಸಾಹುಕಾರ ಕರಿಬಸ್ಯನವರು ಒಂದು ಅಮಾವಾಸ್ಯೆಯ ರಾತ್ರಿ ಚಿನ್ನಾಚಾರಿಯ ಮನೆಯ ಬಾಗಿಲನ್ನು ತಟ್ಟಿದರು. ಚಿನ್ನಾಚಾರಿ ಸಾಹುಕಾರರನ್ನು ಅಪಾದ ಮಸ್ತಕವಾಗಿ ನೋಡಿ ಸಂಶಯ ನಿವಾರಿಸಿಕೊಂಡ ನಂತರ, ಅವರನ್ನು ಒಳ ಕೋಣೆಗೆ ಕರದೊಯ್ದ. ಉಭಯ ಕುಶಲೋಪರಿ ಸಾಂಪ್ರತವಾದಮೇಲೆ. ವ್ಯವಹಾರದ ಮಾತು ಕಥೆಗಳು ಪ್ರಾರಂಭವಾಯಿತು. ಕರಿಬಸ್ಯನವರು ತಮ್ಮ ಹತ್ತಿರವಿರುವ ಸ್ವರ್ಣದ ಬಗ್ಗೆ ಪ್ರಸ್ತಾಪಿಸಿ, ಅದನ್ನು ಘಟ್ಟಿಗಳನ್ನಾಗಿ ಮಾಡಿಕೊಡಬೇಕೆಂದು, ಕೇಳಿದರು. ನಂತರ ತಮ್ಮ ಕಪ್ಪು ಲಾಂಗ್‌ಕೋಟಿನ ಒಳಜೋಬಿನಿಂದ, ಚಿನ್ನವನ್ನು ತೆಗೆದು ಚಿನ್ನಾಚಾರಿಯ ಎದುರಿಗೆ ಸುರಿದರು. ಅದನ್ನು ಕಣ್ಣಿನಲ್ಲೇ ಅಂದಾಜುಮಾಡಿದ ಚಿನ್ನಾಚಾರಿ, ಹತ್ತು ತೊಲೆಯ ಹತ್ತು ಬೊಂಡಾಗಳಾಗುತ್ತದೆ ಎಂದ.

ಕರಿಬಸ್ಯನವರಿಗೆ ಮೊದಲು ಅವನ ಮಾತು ಅರ್ಥವಾಗಲಿಲ್ಲ. ಮುಗುಮ್ಮಾದ ಆ ಸಂದೇಶ ಅರ್ಥವಾಗಲು ಕಳ್ಳಕೊರಮ ಕರಿಬಸ್ಯನವರಿಗೆ ತಡವಾಗಲಿಲ್ಲ. "ಸರಿ" ಎಂದು ಹೂಗುಟ್ಟಿ ಊರಿಗೆ ತೆರಳಿದರು. ಆದರೆ ಚಿನ್ನಾಚಾರಿ ಮಾಡಿಕೊಟ್ಟ ಬೊಂಡಾಗಳಲ್ಲಿ ಐವತ್ತು ತೊಲವೇ ಅವರಿಗೆ ದಕ್ಕಿದಾಗ, ಅವರು ಕೃದ್ಧರಾದರು. ಆದರೆ ಅವನ್ನು ಚಿನ್ನಾಚಾರಿಯ ಮೇಲೆ ಕಾರುವಹಾಗಿರಲಿಲ್ಲ. ಗಲಭೆ ಎಬ್ಬಿಸಿದರೆ ತಾವೇ ಕೈಗೆ ಕಬ್ಬಿಣದಬಳೆ ತೊಟ್ಟುಕೊಳ್ಳಬೇಕಾದ ಸಂದರ್ಭ. ಹೀಗಾಗಿ ಬಿಸಿತುಪ್ಪ ಅವರ ಗಂಟಲಲ್ಲೇ ನಿಂತಿತು. ಚಿನ್ನಾಚಾರಿಯ ಮನೆಯಲ್ಲಿ ಚಿನ್ನದ ಹೊಗೆಯೇ ಹಾಯುವ ಹಾಗಾಯಿತು.

ಇದೇ ಜನವರಿ ಒಂದರಂದು ಮುಳಬ್ಬಾಗಿನ ಪುರಭವನದಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಶರಭಣ್ಣನವರನ್ನು ಒಂದು ಮಣೆಯ ಮೇಲೆ ಕೂಡಿಸಿ, ಅವರ ಕೈಗೆ ಒಂದು ಕವಡೆಯನ್ನು ಕೊಟ್ಟು, ಅದನ್ನು ಚಿಮ್ಮುವಂತೆ ಹೇಳಿ, ಹೀಗೆ ಚಿಮ್ಮಿದ ಕವಡೆ ಎಷ್ಟು ಎತ್ತರಕ್ಕೆ ಜಿಗಿಯುವುದೋ ಅಷ್ಟು ಎತ್ತರಕ್ಕೆ ಪೇರಿಸಿದ ಒಂದು ತೊಲೆಯ ಚಿನ್ನದ ಘಟ್ಟಿಗಳನ್ನು, ಚಿನ್ನಾಚಾರಿಯುವರು ಸ್ವರ್ಣ ಬಾಂಡುಗಳಲ್ಲಿ ತೊಡಗಿಸುವರೆಂದು ನಮಗೆ ಖಚಿತವಾಗಿ ತಿಳಿದು ಬಂದಿದೆ. ಹೇಗೋ ಬಂದು ಹೇಗೋ ಹೋಗಿ, ದೇಶದಸ್ವರ್ಣ ಭಂಡಾರ ಬೆಳೆಯುತ್ತದಲ್ಲಾ ಎಂಬುದೇ ನಮ್ಮ ಸಮಾಧಾನ. ಕೆರೆಯ ನೀರನು ಕೆರೆಗೆ ಚೆಲ್ಲಿ ಚಿನ್ನಾಚಾರಿಯುವರು ನಮ್ಮ ಕಸಬುದಾರರಿಗೆ ಮೇಲ್ಪಂಕ್ತಿ ಹಾಕಿ ಕೊಟ್ಟಿರುವರೆಂದು ನಮ್ಮ ಅಭಿಪ್ರಾಯ.

—ಕೆ. ಎನ್. ಕಿಟ್ಟಿನ್

ಬುಟ್ಟೋ ಬೊಯ್ಗಳ್

ಇಂಡ್ಯಾನ್ ಕಂಡಂ
ಕೆಟ್ ಕೆಟ್ ಬೊಯ್ಗಳ್
ಅಂದ್ರೆ ಬುಟ್ಟೋಗ್ ಪ್ರಾಣ

ಯೂನೋಗ್ ನುಗ್ಗಿ
ಬೊಗಳ್‌ಬಿಟ್ಟಾಂದ್ರೆ
ತಕ್ಕೋ ಬೊಯ್ಗಳ್ ಬಾಣ.

ಅಲ್ಲಾ ಏನ್ರ ಬೂಮಿಗಿಳಿದು
ಬುಟ್ಟಂತಾಕ್ ಬಂದಾಂತನ್ನು
ಜೋತು ಗೀತು ಮಾಡ್ಯಾನವನು
ಬುಟ್ಟೋಗಳ ಮೇಲವನ್ ಕಣ್ಣು.

ಇಂಡ್ಯಾನ್ ಬಯ್ಕೋದ್ ಬುಟ ಬುಡ್ ಬುಟ್ಟೋ
ಅಂತ್ ಔನೇನಾರ್ ಅಂದ್ರೆ
ಮಕದ್ ಮ್ಯಾಗ್ ಅವ್ನ ಉಗಿಸ್ಕೊಂತಾನೆ
ಬುಟ್ಟೋ ಬಾಯ್ಗಡ್ಬಂದ್ರೆ.

ಬಯ್ಕೋದ್ ಬುಟ್ ಬುಡ್ ಕಾಸ್ಮೀರ ಕೊಟ್‌ಬುಡ್
ಅಂತ ಔನೇನಾರ್ ಅಂದ್ರೆ
ಬಲಿ ಆಕ್ತಿನಂತ ಬುಟ್ಟೋ ನುಗ್ಯಾನ್
ಅಲ್ಲಂಗೇ ದೂಡ್ ತೂಂದ್ರೆ !

ಅಸಿ ಅಸಿ ಸುಳ್ಳು ಆಡೋದೆಲ್ಲ
ನಿಲ್ಲಿಸ್ ಬುಡಬೇಕ್ ಬುಟ್ಟೋ
ಅಂತ ಅಲ್ಲಾ ಅಂದ್ರೆ— ಅಲ್ಲಾ ಆದ್ರೇನ್
ತರಿದೇ ಆಕ್ಯಾನ್ ಬುಟ್ಟೋ


ಬೈಬಾರ್ದು ಅನ್ನೋ ಆದ್ಮಿಗಳೆಲ್ಲ
ದೇವ್ರೇ ಆಗ್ಲಿ ಎಲ್ಲ
ಬೊಯ್ಗ್ಗಳ ಬಾಯ್ಗ್ಗಡ್ಬಂದ್ರೆ
ಮಾನವುಳಸಾಕಿಲ್ಲ.

ನರಕಕ್ಕೆಳಸಿ ನಾಲ್ಗೆ ಸೀಳ್ಸಿ
ಬಾಯಂ ಒಲಿಸಾಕಿದ್ರೂನೆ
ಮುಂಗ್ನಲ್ ಇಂಡ್ಯಾನ ಜರೆಡ್ತಾನೆ
ಅವನ್ ಬುದ್ದೀನ್ ನೀನ್ ಕಾಣೆ

ಕಾಶ್ಮೀರ ಓಗ್ಲಿ ಪಾಕೇ ಓಗ್ಲಿ
ಎಲ್ಲಾ ಕೊಂಡ್ಕೊಂಡ್ ಓಗ್ಲಿ
ಪರ್ಮಿಟ್ ಇರೋತನಕ ಬುಟ್ಟ್ಯೋ
—ಸಾಬರ ಬೊಯ್ಗ್ಳ್ ನಂಗ್ಲಿ

(ರತ್ನಂಗೆ ಅಡ್ಡಬಿದ್ದು)

—(ಅಳ್ಳೀಗಮಾರ)



ಕಾರ್ಪೊರೇಷನ್ ಆಫೀಸಿನಲ್ಲಿ ಕ್ರಿಸ್‌ಮಸ್ ಹಬ್ಬದ ನಿಮಿತ್ತ ಸಭೆಗಳಲ್ಲಿ ಗೊಂದಲ ಬೇಡ ಅಂತ ವಿಯಟ್ನಾಂ ತರಹ ತಾತ್ಕಾಲಿಕ ಶಾಂತಿ ಸಂಧಾನ ಮಾಡಿಕೊಂಡಿದ್ದಾರಂತೆ ಹೌದಾ!

ಪುಟ್ಟಣ್ಣ ಮರಳಿದಾಗ

ತಂತಿ ಉಂಟೆಂದು ತಂತಿಯವ ಹೇಳಿದಾಗಲೇ ಎದೆ ಜುಮ್ಮೆಂದಿತು. ತೆರೆದು ಓದಿದೆ. Pu ttanna Barked to-day meet him Gulur station ಎಂದು ಮುಂಬಯಿಯಿಂದ ನಮ್ಮ ಶಿವಣ್ಣ ತಂತಿ ಕೊಟ್ಟಿದ್ದ. ಪುಟ್ಟಣ್ಣನಿಗೆ ಹುಚ್ಚು ನಾಯಿಗಳು ಕಡಿದುವೆ? ಅದಕ್ಕೇ ಅವನು ಬೊಗಳಿದನೇ? ಪಾಕಿಸ್ಥಾನದಿಂದ ಅಷ್ಟು ಸುಲಭವಾಗಿ ಅವು ಬರುವುದಾದರೂ ಹೇಗೆ? ಪುಟ್ಟಣ್ಣ ಬೊಗಳಲು ಮತ್ತಾವ ಕಾರಣ? ಇತ್ಯಾದಿಗಳ ಪ್ರಶ್ನೆಪತ್ರಿಕೆ ಸಿದ್ಧವಾದರೂ, ಮತ್ತೆ ಹೊಳೆಯಿತು: ಅದು Barked ಅಲ್ಲದೆ ಇರಬಹುದು, Started ಎಂದಿದ್ದುದನ್ನು ತಂತಿಯವರು ಹಾಗೆ ಬರೆದಿರಬಹುದು ಎಂದುಕೊಂಡೆ.

ಉತ್ತರ ಭಾರತಕ್ಕೆ ಹೋದ ಪುಟ್ಟಣ್ಣ ಅಂತೂ ಗುಲ್ಲೂರು ತಲಪಿದ. ಸ್ಟೇಷನ್ನಿಂದ ಕರೆದುಕೊಂಡು ಬಂದೆ.

'ಯಾವೂರು ಏನೆಲ್ಲ ನೋಡಿದೆಯೊ ಪುಟ್ಟಣ್ಣ?' ಎಂದು ಕೇಳಿದ್ದೇ ತಡ 'ಅದೇನು ಕೇಳ್ತೀಯೋ. ನಾನು ನೋಡಿದ್ದು ನೀನು ಕನಸಿನಲ್ಲಿ ಕಾಣೋದಕ್ಕುಂಟೇ? ಫಾರ್ವರ್ಡ್ ಏರಿಯಾಕ್ಕೂ ಹೋಗಿದ್ದೇನೆ. ಖೇಮ್ ಕರಣ್. ಗಾದ್ರಾ ರೋಡ್, ಅಖ್ನೂರ್ ಎಲ್ಲ ನೋಡ್ಬಿಟ್ಟೆ. ಜೋಧ್‌ಪುರದಲ್ಲಿ ಒಂದು ವಾರ ಇದ್ದೆ. ಬರ್ಕಿಗೆ ಮಾತ್ರ ಹೋಗಲಾಗಲಿಲ್ಲ. ಟಾಂಕುಗಳ ವಿಶಯ ನೀನು ಕೇಳ್ತೀಂತ ನನಗೆ ಗೊತ್ತು. ಪ್ಯಾಟನ್ ಶರ್ಮನ್ ಟ್ಯಾಂಕುಗಳಲ್ಲಿ ಸಾಲುಸಾಲಾಗಿ ಬಿದ್ದುಕೊಂಡಿವೆ. ಎಳೆ ತನದಲ್ಲಿ ವೈಧವ್ಯ ಪ್ರಾಪ್ತವಾದವರ ಹಾಗೆ. ನಮ್ಮೂರಿನಲ್ಲಿ ನೀರಿಲ್ಲದ ಟಾಂಕುಗಳಿಲ್ಲವೆ, ಹಾಗೆ.' ಎಂದವನೆ ಪೈರಾಣ್ ಶರ್ಟಿನ ಎಡಕಿಸೆಗೆ ಕೈಹಾಕಿ ಕಬ್ಬಿಣದ ಚದರೊಂದನ್ನು ಹೊರತೆಗೆದ. 'ಇದು ನೋಡು, ಪ್ಯಾಟನ್ ಟ್ಯಾಂಕಿಗೆ ಗನ್ನನ್ನು ಜೋಡಿಸಿದ ಸ್ಕ್ರೂ ಅಮೆರಿಕದಲ್ಲಿ ಮಾಡಿದ್ದು ಎಂದು ಮಾರ್ಕ್ ತೋರಿಸಿದ, U S.A. ಎಂದಿತ್ತು.

ನಮ್ಮವರ ಸಾಹಸಕ್ಕೆ ನನ್ನ ಮೆಚ್ಚುಗೆ ವ್ಯಕ್ತಪಡಿಸಿದೆ. 'ಇಷ್ಟೇ ಅಲ್ಲ, ಇಲ್ಲಿ ನೋಡು' ಎಂದು ಬಲ ಕಿಸೆಯಿಂದ ಇನ್ನೊಂದು ಬೆಳ್ಳಗಿನ ತುಂಡನ್ನು ತೆಗೆದ. 'ಇದು ಸೇಬರ್ ಜೆಟ್ಟಿನ ರೆಕ್ಕೆಯ ತುಂದಿಭಾಗ. ನಮ್ಮ ವಿಜಯದ ಸಂಕೇತವೆಂದು ತಂದಿದ್ದೇನೆ. ನೀನು ಕೇಳಿದರೂ ಕೊಡೋದಿಲ್ಲ' ಎಂದ.

‘ನೀನೆ ಇಟ್ಟುಕೋ. ಮುಂದಿನ ಶತಮಾನದ ಸಂಶೋಧಕರಿಗೆ ಬೇಕಾಗಬಹುದೆಂದು ಸಲಹೆಕೊಟ್ಟೆ. ಇನ್ನೇನು ಹೊರಡುವವನಿದ್ದೆ. ಇನ್ನೊಂದು ಕಾಗದದ ಕಟ್ಟು ತೆಗೆದ. ‘ಪ್ರತ್ಯಕ್ಷ ದರ್ಶನದಿಂದ ಪಡೆದಲಾಭ—ನಾ ಬರೆದ ವಾಸ್ತವಿಕ ಹಿನ್ನೆಲೆಯ ಕವಿತೆಗಳು. ಸ್ವಲ್ಪ ಕೇಳು...’ ಎಂದು ಕೊರೆಯಲಾರಂಭಿಸಿದ. ಅವನ ‘ಕೋಡ್‌ಲ್ಯಾಂಗ್ವೇಜ್’ (ನವ್ಯ) ಕವಿತೆಗಳ ವಾಚನ ನಿರರ್ಗಳವಾಗಿ ಸಾಗಿತ್ತು.

ಸಧ್ಯ! ನಮ್ಮ ಸೈನಿಕರೆದುರಿಗೆ ಕಾವ್ಯವಾಚನವನ್ನು ಅವ ಮಾಡಿದ್ದಿಲ್ಲ!

—ಕಿರಣ ಗುಲ್ಲೂರು



ಯಾರನ್ನೋ ನೀನು ರೂಪವತಿ ಗಂಡ ಅಂತ ಅಂದಿದ್ದು ನೀನು!

ದಕ್ಷಿಣೆ

ಧರ್ಮಸಾಗರ ಸದಾಶಿವಯ್ಯರವರನ್ನು ಭೇಟಿಮಾಡಿ, ಲೇಖನ ಬರೆದು ಕಳಿಸು ಎಂದು ಸಂಪಾದಕರು ತಂತಿ ಕಳಿಸಿದಾಗ ಸ್ವಲ್ಪ ಬೆಚ್ಚಿಬಿದ್ದೆ. ಸದಾಶಿವಯ್ಯರ್ ಅಂದರೆ ನಮ್ಮೂರಿನ ಅಸಾಧ್ಯ ಶ್ರೀಮಂತರು. ಯುದ್ಧಕಾಲದಲ್ಲಿ ಕಸಾಯಿ ಅಂಗಡಿಗಳಿಗೆ ದನಗಳನ್ನು ಸರಬರಾಜುಮಾಡಿ ೧೦–೨೦ ಲಕ್ಷಗಳಿಸಿದ್ದರು ಎಂದು ಜನರ ಅಂಬೋಣ. ಯುದ್ಧದಲ್ಲಿ ನಿರತರಾಗಿದ್ದ ಸೈನಿಕರಿಗೆ ಆಹಾರ ಒದಗಿಸುವುದರಲ್ಲಿ ಸದಾಶಿವಯ್ಯರು ತುಂಬಾ ಮೆಹನತ್ತುವಹಿಸಿದ್ದರಿಂದಲೇ ಧರ್ಮಸಾಗರ ಎಂದು ಅವರಿಗೆ ಬಿರುದು ದಯಪಾಲಿಸಲ್ಪಟ್ಟಿತ್ತು. ಸ್ವಂತ ಖರ್ಚಿನಲ್ಲಿ ದೊಡ್ಡ ಅನಾಥಾಲಯವೊಂದನ್ನು ಕಟ್ಟಿಸಿ ನಡೆಸಿಕೊಂಡು ಬರುತ್ತಿದ್ದರು. ಜನರ ಮಾತಿಗೆ ಅಡ್ಡಿಯುಂಟೇ ? ಅವರ ಕಕ್ಷವಾಳಗಳ ಮಕ್ಕಳಿಗೋಸ್ಕರವೇ ಅನಾಥಾಲಯ ಕಟ್ಟಿಸಿದ್ದ ಎಂದು ಕುಹಕಿಗಳು ಆಡಿದ್ದೂ ಉಂಟು. ಹೀಗೆ ಅಧಿಕಾರದಲ್ಲಿರುವವರ ಹೊಗಳಿಕೆಗಳು, ಊರ ಬಡಜನರ ತೆಗಳಿಕೆಗಳು, ಎರಡನ್ನೂ ಸಮತೆಯಿಂದ ನೋಡುತ್ತ ಸದಾಶಿವಯ್ಯರು ಹಣದಹುತ್ತವನ್ನೇ ಬೆಳಸುತ್ತಿದ್ದರು. ಹುತ್ತದಿಂದ ಹಣವನ್ನು ತೆಗೆದು ರೈಲ್ವೆಸ್ಟೇಷನ್ನಿನಬಳಿ ಧರ್ಮಾರ್ಥದ ಛತ್ರವನ್ನು ಕಟ್ಟಿಸಿದರು. ಜನರೆಲ್ಲ ಮುಕ್ತಕಂಠದಿಂದ ಹೊಗಳಿದರು. ಧರ್ಮಛತ್ರದ ಹೊರ ಅಂಗಡಿಗಳಿಂದ ತಿಂಗಳಿಗೆ ಸಾವಿರ ರೂಪಾಯಿ ಬಾಡಿಗೆ ಬರಲಾರಂಭಿಸಿತು ಧರ್ಮಸಾಗರರ ಹುತ್ತಕ್ಕೆ.

ಇಂತಹ ಧನರೇಖೆಯಿದ್ದ ಸದಾಶಿವಯ್ಯರನ್ನು ಭೇಟಿಮಾಡಬೇಕಾದರೆ ಉತ್ಸಾಹವು ಸಹಜವಾದದ್ದೇ, ಅವರಿಗೊಂದು ಪತ್ರಬರೆದೆ. ಹೀಗೆ ನಮ್ಮ ಪತ್ರಿಕೆಯಲ್ಲಿ ತಮ್ಮ ವಿಷಯದ ಲೇಖನ ಬರೆಯಬೇಕೆಂದಿದ್ದೇನೆ. ತಾವು ಭೇಟಿ ದಯಪಾಲಿಸಿದರೆ, ತಮ್ಮ ಅನುಕೂಲ ನೋಡಿಕೊಂಡು, ನಿಮ್ಮನ್ನು ಕಾಣುತ್ತೇನೆ, ನಿಮ್ಮ ಬುದ್ದಿವಾದದ ಮಾತುಗಳನ್ನು ಲೋಕಕ್ಕೆ ಡಂಗುರ ಹೊಡೆಸುತ್ತೇನೆ. ತಮ್ಮ ಶ್ರದ್ಧೆ, ಕಾರ್ಯತತ್ಪರತೆ, ಚಾಣಾಕ್ಷತನ ವ್ಯಾಪಾರ ಕುಶಲತೆ, ಔದ್ಯೋಗಿಕ ಕುಶಾಗ್ರಮತಿ, ಇವೆಲ್ಲವನ್ನೂ ನಮ್ಮ ದೇಶದ ಜನ ಕಾಣಬೇಕು. ಕಂಡು ನಿಮ್ಮ ಆದರ್ಶವನ್ನು ಅನುಕರಿಸಬೇಕು ಎಂದು ಅಕ್ಷರ ಅಕ್ಷರಕ್ಕೂ ಬೆಣ್ಣೆಸವರಿ ಬರೆದಿದ್ದೆ.

ಅವರ ಕಾರ್ಯದರ್ಶಿಯಿಂದ ಕಾಗದ ಬಂದಿತು. ಧರ್ಮಸಾಗರರು ನಿಮಗೆ ಭಾನುವಾರ ಸಂಜೆ ಐದು ಗಂಟೆಗೆ ಭೇಟಿ ದಯಪಾಲಿಸಿದ್ದಾರೆ ಎಂದು ಸಹಿ ಹಾಕಿತ್ತು

ಕಾಗದಕ್ಕೆ, ಕಾರ್ಯದರ್ಶಿಯೆಂದು, ಗ್ರೇಸ್ ಎಮರಲ್ಡ್ ಅಂತ. ಇದೇನು ಗಂಡೋ? ಹೆಣ್ಣೋ! ಈ ಕಾರ್ಯದರ್ಶಿ ಎಂದು ಅನುಮಾನ ಬಂತು. ಯಾರಾದರೆ ನಿಮಗೇನು ಎಂದು ಮಂದಿ ಜನ ಕೇಳಬಹುದು. ಆದರೆ ದೊಡ್ಡವರನ್ನು ಭೇಟಿ ಮಾಡಲು ಹೊರಟಾಗ, ಅವರ ಆಜೂಬಾಜೂ ಪರಿವಾರದವರನ್ನು ಮರೆಯಬಾರದು. ಉದಾಹರಣೆಗೆ ಹೇಳ್ತೀನಿ, ಧರ್ಮಸಾಗರರ ಭೇಟಿಗೆ ಭಾನುವಾರ ಐದಕ್ಕೆ ಹೋಗಬೇಕಾದರೆ ನಾನು ಈ ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇನೆ. ಕಾಂಪೌಂಡ್ ಗೇಟಿನ ಬಳಿ ನಿಂತಿರುವ ಪಹರೆಯವನಿಗೆ ಕೊಡಲು ಒಂದು ಕಟ್ಟು ಬೀಡಿ. ಅನಂತರ ಸಾಹೇಬರ ಮನೆಬಾಗಿಲನ್ನು ತಲುಪಿದಮೇಲೆ ಅಲ್ಲಿರುವ ಜವಾನನಿಗೆ ಒಂದೆರಡು ಸಿಗರೇಟ್. ಮನೆ ಜವಾನನಿಗೆ ಬೀಡಿ ಕೊಟ್ಟರೆ ಕೆಲಸ ಕೆಡ್ತು. ಅವ ಅದನ್ನು ನಿಮ್ಮ ಮುಖಕ್ಕೆ ಎಸೆದು, ನಾನು ಯಾರು ಅಂತ ತಿಳಿಕೊಂಡ್ರಿ! ಪಹರೆ ಸಿಪಾಯಿ ನಾನು? ಧಫೆದಾರ್ ಕಣ್ರಿ ನಾನು! ಎಂದು ಮೀಸೆ ತಿರುವುತ್ತಾನೆ. ಆಮೇಲೆ ಅವನ ಕೈಲಿ ಪರಿಚಯದ ಕಾರ್ಡ್ ಕೊಟ್ಟು ಕಳಿಸಿದರೆ, ಕಾರ್ಯದರ್ಶಿ ಬರುತ್ತಾನೆ ಅಥವಾ ಬರುತ್ತಾಳೆ. ಅವರ ಉದ್ದಗಾತ್ರ, ಉಬ್ಬು ತಗ್ಗು, ಒಟ್ಟೆಬರೆ, ನೋಡಿಕೊಂಡು ಪೆನ್ಸಿಲುಗಳನ್ನೋ, ಕೈವಸ್ತ್ರಗಳನ್ನೋ, ಚಾಕಲೇಟುಗಳನ್ನೋ ಅರ್ಪಿಸಬೇಕು. ಆಮೇಲೆತಾನೆ ಸಾಹೇಬರ ಭೇಟಿ.

ಆದುದರಿಂದಲೇ ಕಾರ್ಯದರ್ಶಿಯು, ದರ್ಶಿನಿಯೋ ಎಂಬುದನ್ನು ಖಂಡಿತ ಮಾಡಿಕೊಳ್ಳಬೇಕಾಯಿತು. ಪತ್ರಿಕಾ ಪ್ರಪಂಚದವರು ನಾವು, ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮೀಸೆಮೇಲೆ ಆಗಳು ಕುಣಿಸ್ತೀನಿ. ಚಪ್ಪಲಿ ತಳ ತೂತಾಗಿದ್ದರೂ, ಖ್ಯಾತಿಗೇನು ಕಡಿಮೆ ಇಲ್ಲ. ಸೆಟ್ಟಿಗೆ ಧರ್ಮಸಾಗರರ ಮನೆಗೆ ಫೋನ್ ಮಾಡಿದೆ. ಹೇಗೂ ಕಾರ್ಯದರ್ಶಿ ಮಾತಾಡುತ್ತೆ. ಆಗ ಗಂಡೋ ಹೆಣ್ಣೋ ತಿಳಿದುಕೊಳ್ಳಬಹುದು, ಅಂತ ಅಂದಾಜು. ಫೋನ್ ಮಾಡಿದಾಗ, ರಿಸೀವರ್ ಎತ್ತಿದರು, ನನ್ನ ಪುಣ್ಯಕ್ಕೆ ಧರ್ಮಸಾಗರರೇ ಆಗಬೇಕೆ? "ಯಾರು ಏನು ಬೇಕಾಗಿತ್ತು. ಧರ್ಮಸಾಗರ್ ಮಾತನಾಡುವುದು" ಎಂದರು. "ಮಹಾಸ್ವಾಮಿ, ನಾನು ಬಚ್ಚ, ಇಂತಹ ಪತ್ರಿಕೆಯ ವರದಿಗಾರ. ಭಾನುವಾರ ನಿಮ್ಮ ಭೇಟಿಗಾಗಿ ೫ ಗಂಟೆಗೆ ಬರಹೇಳಿದ್ದೀರಿ. ತಮ್ಮ ಹೊಚ್ಚ ಹೊಸ ಫೋಟೋ ಒಂದನ್ನು ಆಗ ದಯಪಾಲಿಸಿದರೆ ತುಂಬಾ ಸಹಾಯವಾಗುತ್ತದೆ. ಇಲ್ಲದಿದ್ದರೆ ನಮ್ಮ ಸ್ಟಾಫ್ ಫೋಟೋಗ್ರಾಫರನ್ನು ಕರೆದುಕೊಂಡು ಬರ್ತೀನಿ. ತಾವು ದಯಮಾಡಿ "ಒಂದು ನಿಲುವು" ಕೊಡಬೇಕು ಎಂದೆ.

"ಒಂದು ನಿಲುವು"? ಹಾಗಂದರೇನ್ರಿ. ಅದೇನು ಹಣ ಗಿಣ ಅಲ್ವಲ್ಲ" ಎಂದು ಕೇಳಿದರು. "ಛೇ ಛೇ ಹಣ ಅಲ್ಲ! ನಿಲುವು ಎಂದರೆ ಇಂಗ್ಲೀಷಿನಲ್ಲಿ pose ಅಂತಾರಲ್ಲಾ! ಅದು" ಎಂದು ವಿಶದೀಕರಿಸಿದೆ.

"ಆಗಬಹುದು, ಕಾರ್ಯದರ್ಶಿಗಳಿಗೂ ಹೇಳಿರ್ತೀನಿ" ಎಂದರು, ಪಿಸುಮಾತಿನಲ್ಲಿ ಪೇಪರ್‌ನೋನು, ಭಾನುವಾರ ಭೇಟಿ, ಫೋಟೋ ತೊಗೋತಾನಂತೆ, ನೀನೂ

ಹೊಸ ಫ್ರಾಕ್ ಹಾಕ್ಕೊಂಡು ಶೃಂಗಾರ ಮಾಡಿಕೊಂಡು ಬಂದಿರು ಎಂದು ಯಾರಿಗೋ ಹೇಳಿದರು, ನನಗೂ ಕೇಳಿಸಿತು. ಕಾರ್ಯದರ್ಶಿನಿ ಅಂತ ಖಂಡಿತವಾಯಿತು. ಲಂಗಫ್ರಾಕಿನ ಕಾರ್ಯದರ್ಶಿನಿ. ಅಂತಲೂ ತಿಳಿಯಿತು. ಸಾಹೇಬರ ಅತಿ ಸಮೀಪದಲ್ಲೇ ಇರಬೇಕು. ಅದಕ್ಕಾಗಿಯೇ ಪಿಸುಮಾತನಾಡುತ್ತಿದ್ದಾರೆ ಎಂದುಕೊಂಡೆ. ಅಂದಮೇಲೆ ಹೂಗೊಂಚಲೇ ಸಾಕು. ಈ ಕಪ್ಪು ದೊರೆಸಾನಿಗೆ ಎಂದುಕೊಂಡೆ. ಕಾಕಡಾ ಹೂವಿನ ಸೊಪ್ಪುಸೆದೆಗಳ " ಬೊಕೆ " ಯನ್ನು ತೆಗೆದುಕೊಂಡು ಹೋದರೆ ಆಯಿತು ಎಂದು ತೀರ್ಮಾನಿಸಿದೆ.

ಭಾನುವಾರ ಬಂತು-ಬೀಡಿ ಕಟ್ಟು, ಸಿಗರೇಟ್, ಬೊಕೆ, ಪೆನ್ಸಿಲ್ಲು ಕಾಗದ ಎಲ್ಲಾ ಹಿಡಿದುಕೊಂಡು ಧರ್ಮಸಾಗರರ ಮನೆಗೆ ಹೋದೆ. ಯೋಜನೆಯ ಪ್ರಕಾರ ಎಲ್ಲಾ ಉಪಚಾರಗಳನ್ನೂ ಮಾಡಿದೆ. ಕಾರ್ಯದರ್ಶಿನಿ ಮಾತ್ರ ಕೈಕೊಟ್ಟಳು. ಕಪ್ಪು ದೊರೆಸಾನಿ ಅಲ್ಲ ಆಕಿ. ಬಿಳಿ ದೊರೆಸಾನಿ. ಪೌಡರ್ ಬಿಳಿ ಅಲ್ಲ. ದಿಟವಾಗಲೂ ಬೆಳ್ಳಗಿದ್ದಳು. ತೆಳ್ಳಗಿದ್ದಳು. ಸುಂದರಿ. ತುಂಬು ಸುಂದರಿ, ಆಕೆ ಕೈಲಿ ಕಾಕಡಾ ಹೂವಿನ ಬೊಕೆ ಹೇಗೆ ಕೊಡೋದು ಎಂದು ಅನುಮಾನಿಸುತ್ತಿದ್ದೆ. ಜತೇಲಿ ಬಂದಿದ್ದ ಫೋಟೋಗ್ರಾಫರ್ ಬೇಗ ಚೀಲದಿಂದ " ಬೊಕೆ " ಯನ್ನು ತೆಗೆದು ಆಕೆಗೆ ಅರ್ಪಿಸಿಯೇ ಬಿಟ್ಟ. ಅಷ್ಟಕ್ಕೆ ಆಕೆಗೆ ಖುಷಿ. ಕಿವಿಯಿಂದ ಕಿವಿತನಕ ಬಾಯಿಬಿಟ್ಟಳು. ಅವಲಕ್ಷಣ ಹಲ್ಲುಗಳು. ಮುಂದಿನ ಎರಡು ಹಲ್ಲು ಹಳದಿ ಬಣ್ಣ. ಕಪ್ಪು ಚುಕ್ಕಿ. ಹಲ್ಲು ಹಲ್ಲಿಗೆ ಕಡ್ಡಿ ತೂರಿಸಬಹುದಾದಷ್ಟು ಅಂತರ. ಬಾಯಿ ಬಿಡಿಸದೆ ಇದ್ದರೆ ಈಕೆ ಚೆನ್ನ ಎಂದುಕೊಂಡೆ.

" ಬನ್ನಿ ಇಲ್ಲಿ ಕೂತುಕೊಳ್ಳಿ ಸಾಹೇಬರು ಇನ್ನೈದು ನಿಮಿಷಗಳಲ್ಲಿ ಇಲ್ಲಿಗೆ ಬರ್ತಾರೆ. ಬೊಂಬಾಯಿನಿಂದ ಟ್ರಂಕ್ ಕಾಲ್ ಬಂತು. ತುರ್ತಾಗಿ ಮಾತನಾಡುಕ್ಕೆ ಹೋಗಿದ್ದಾರೆ " ಎಂದು ದಂತವಕ್ರ ಕಾರ್ಯದರ್ಶಿನಿ ಹೇಳಿದಳು, ಬೈಠಕ್‌ಖಾನೆಯಲ್ಲಿ ಕೂರಿಸಿ ಅವಳು ಒಳಕ್ಕೆ ಹೋದಳು.

ಭವ್ಯವಾದ ಬೈಠಕ್‌ಖಾನೆ. ದೊಡ್ಡ ಮೇಜು. ಅದರ ಮೇಲೆ ಪಟ್ಟದ ಬೊಂಬೆ ಕೂರಿಸಿದಂತೆ ದೊಡ್ಡ ಗಾಜಿನ ಸ್ಟಾಂಡ್ ಒಂದು, ಗಾಜಿನ ಸ್ಟಾಂಡ್‌ನಲ್ಲಿ ಏನೋ ಇದ್ದಂತಿತ್ತು, ಎದ್ದು ಹೋಗಿ ಹತ್ತಿರ ನಿಂತು ನೋಡಿದೆ.

ಎರಡು ತೆಳುವಾದ ಗಾಜಿನ ಪ್ಲೇಟುಗಳ ಮಧ್ಯೆ ಹಳೇ ನಾಲ್ಕಾಣೆ ನಾಣ್ಯವನ್ನು ಇರಿಸಿತ್ತು. ಆ ಗಾಜಿನ ಪ್ಲೇಟುಗಳಿಗೆ ಭರ್ಜರಿ ಪೀಠ ಮತ್ತು ಚೌಕಟ್ಟು ಕೂಡ, ನಾಲ್ಕಾಣೆ ನಾಣ್ಯಕ್ಕೆ ಇಷ್ಟೆಲ್ಲಾ ಶೃಂಗಾರ ಏಕೆ, ಇಷ್ಟೆಲ್ಲಾ ಮರ್ಯಾದೆ ಯಾಕೆ ? ಬಹುಶಃ ಇವನು ಮೊದಲು ಸಂಪಾದಿಸಿದ ಕೂಲಿ ನಾಲ್ಕಾಣೆ ಇರಬಹುದು ಎನ್ನಿಸಿತು. ಮೊದಲು ಸಂಪಾದಿಸಿದಾಗ ಬಡವ ಆಗಿರ್ತಾನೆ, ಆಗ ನಾಲ್ಕಾಣೆ ಸಿಕ್ಕರೆ ಊಟಕ್ಕೆ ಖರ್ಚಾಗಿರಬೇಕು ಎನ್ನಿಸಿತು.

ಹಳೇ ಕಾಲದ ಪಾವಲಿ, ದಿಟ, ಆಗಿನ ಕಾಲದಲ್ಲಿ ನಾಲ್ಕಾಣೆ ಕೊಟ್ಟರೆ ಎಂಟು ದೊಡ್ಡ ಉದ್ದಿನ ವಡೆಗಳು ಸಿಕ್ಕುತ್ತಿತ್ತು. ಸಣ್ಣ ಸಣ್ಣ ತೂತಿರುವ ದೊಡ್ಡ ದೊಡ್ಡ ವಡೆಗಳು. ಈಗಿನ ಕಾಲದಲ್ಲಿ ಆ ಪಾವಲಿಗೆ ಸರಿಸಮ ಎಂದರೆ ೨೫ ಪೈಸೆ. ೨೫ ಪೈಸೆಗೆ ಏನು ಸಿಗುತ್ತೆ ? ದೊಡ್ಡ ದೊಡ್ಡ ತೂತಿರುವ ಸಣ್ಣ ಸಣ್ಣ ಎರಡೂವರೆ ವಡೆ.

ಆಗಿನಕಾಲದಲ್ಲಿ ಪಾವಲಿಕೊಟ್ಟರೆ ಒಂದು ಊಟ ಹಾಕ್ತಾ ಇದ್ದರು. ಈಗ ಪಾವಲಿ ಕೊಟ್ಟರೆ ತಟ್ಟೆಹಾಕ್ತಾರೆ. ಆಮೇಲೆ ರೂಪಾಯಿ ಕೊಟ್ಟರೆ ಊಟ ಹಾಕ್ತಾರೆ.

ಇಂತಹ ಪ್ರಾಚೀನ ವೈಭವದ ನೆನಪಿಗೋಸ್ಕರ ಪಾವಲಿಯನ್ನು ಧರ್ಮ ಸಾಗರರು ಕಟ್ಟುಹಾಕಿಸಿ ಪ್ರದರ್ಶಿಸುತ್ತಿದಾರೆಯೇ ಎನಿಸಿತು. ಅಷ್ಟುಹೊತ್ತಿಗೆ ಧರ್ಮಸಾಗರರು ಬೈರಕ್ ಖಾನೆಗೆ ಬಂದರು. ಭವ್ಯವಾದ ಮೂರುತಿ. ಆರಡಿ ಎತ್ತರದ ಆಸಾಮಿ. ಆರಡಿ ಸುತ್ತಳತೆಯೂ ಇರಬೇಕು. ಪಂಚೆ ಕಚ್ಚೆಪಂಚೆ ಉಟ್ಟಿದ್ದಾನೆ. ಮೈ ಮೇಲೊಂದು ಟವಲು ಹೊದ್ದಿದ್ದಾನೆ. ಚಿನ್ನದ ಕಟ್ಟಡದಲ್ಲಿ ಕಟ್ಟಿದ ರುದ್ರಾಕ್ಷಿಯೊಂದು ಕತ್ತಿನಿಂದ ಎದೆಯಮೇಲೆ ಇಳಿ ಬಿದ್ದಿದೆ. ಕರಿಮರದಲ್ಲಿ ಕಡೆದ ವಿಗ್ರಹದಂತಿದ್ದಾನೆ. ವಿಶಾಲವಾದಹಣೆಯ ಮೇಲೆ ಮೂರುಬೆರಳಗಲ ವಿಭೂತಿ ಪಟ್ಟೆ, ಮಧ್ಯೆ ಕುಂಕುಮದ ಬಟ್ಟು. ಥೇಟ್ ಸ್ಮಶಾನ ರುದ್ರನ ಕಳೆಯಿದೆ, ಉಡಿದಾರ ದಷ್ಟು ದಪ್ಪನಾದ ಜನಿವಾರದಿಂದ ಮೂರು ಭಾರಿ ಬೀಗದ ಕೈಗಳು, ಇವನು ನಡೆದಾಗ ಲೆಲ್ಲ ಢಮರುಗ ಬಾರಿಸಿದಂತೆ ಸಪ್ಪಳಮಾಡುತ್ತಿವೆ. ಹಿಂದೆಯೇ ಕಾರ್ಯದರ್ಶಿನಿ. ಗೌರವರ್ಣದ, ಗಿರಿರಾಜ ಸುತೆಯಂತೆ ಕಂಗೊಳಿಸುತ್ತಿದ್ದಾಳೆ. ಅಗ್ನಿಗೆ ಅಭಿಷೇಕ ಮಾಡಿ ದ ಹಾಗೆ ಧರ್ಮಸಾಗರರು ನಿಂತಾಗ ಆ ಮುನ್ನಲೆಯಲ್ಲಿ ಆಕೆ ಮಂಜಿನಲ್ಲಿ ಕಡೆದ ಕನ್ಯೆ ಯಂತೆ ಕಾಣುತ್ತಿದ್ದಾಳೆ.

" ಏನು ರಾಯರು ! ಮೇಜಿನ ಮೇಲಿನ ಚೌಕಟ್ಟು ನೋಡ್ತಾ ಇದ್ದೀರಿ ! ಸ್ವಾರಸ್ಯವಾಗಿತೆಯೇ " ಎಂದು ಧರ್ಮಸಾಗರರು ಕೇಳಿದರು.

" ಬಲು ಕುತೂಹಲಕಾರಿಯಾಗಿದೆ. ಭಾವೋದ್ವೇಗಕ್ಕೆ ಇದು ಕಾಣಿಕೆಯಾಗಿರ ಬಹುದು ಎನ್ನಿಸಿತು " ಎಂದೆ.

" ಕೂತುಕೊಳ್ಳಿ, ಅದರ ಕತೆ ಹೇಳ್ತೀನಿ " ಎಂದು ನಮ್ಮನ್ನು ಕೂರಿಸಿ ಅವರೂ ಕೃಷ್ಣಾರ್ಜಿನ ಹಾಕಿದ್ದ ಸೋಫಾಮೇಲೆ ಕುಳಿತರು. ಆನಂತರ ಹೇಳಿದರು.

"ಹೋದವರ್ಷ ಬೇಸಿಗೆ ಕಾಲ ಬಂದಾಗ ಮಲೆನಾಡಿನ ಹಳ್ಳಿಕಡೆ ತಂಪಾಗಿ ಹೋಗಿರೋಣ ಎರಡುದಿವಸ ಅನ್ನಿಸಿತು. ಕೆಮ್ಮಣ್ಣುಗುಂಡಿಯಲ್ಲಿ ಒಂದುವಾರವಿರಲು ಗ್ರೇಸ್ ಎಲ್ಲಾ ಏರ್ಪಾಡುಗಳನ್ನು ಮಾಡಿದಳು. ಅಲ್ಲಿಗೆ ಹೋಗಿದ್ದೆವು. ಬೆಳಿಗ್ಗೆ ತಿಂಡಿತೀರ್ಥ ಮುಗಿಸಿಕೊಂಡು ವಾಕಿಂಗ್ ಹೋಗುತ್ತಿದ್ದೆ. ಒಂದುದಿವಸ ವಾಕಿಂಗ್ ಹೋಗುತ್ತಿದ್ದಾಗ ಹಳ್ಳಿಯೊಂದು ಕಾಣಿಸಿತು. ನೋಡಿಕೊಂಡು ಬರೋಣ ಅಂತ ಹೋದೆ. ಹಳ್ಳಿಯರಸ್ತೆಯಲ್ಲಿ ಹೋದ್ರೆ, ಎದುರಿಗೆ ಒಬ್ಬಬ್ರಾಹ್ಮಣ ಸಿಕ್ಕಿದ. ನನ್ನನ್ನೇ

ದುರುಗುಟ್ಟಿಕೊಂಡು ನೋಡಿದ. ನಮಸ್ಕಾರ ಅಂದ. ಇವತ್ತು ನೀವು ನನ್ನ ಉದ್ಧಾರ ಮಾಡಬೇಕು ಎಂದು ಎರಡೂ ಕೈಜೋಡಿಸಿದ.

ಇವನ ಉದ್ಧಾರವನ್ನ ಆ ಹಳ್ಳಿಯಲ್ಲಿ ಹೇಗೆ ಮಾಡೋದು ನಾನು ? ನಮ್ಮ ಷಹರಿಗೆ ಬಂದರೆ ಸೇಂದಿ ಪಡಖಾನೇಲಿ ಕ್ಯಾಷಿಯರ್ ಕೆಲಸ ಕೊಡಿಸಬಹುದು. ಅಥವಾ ಕಸಾಯಿ ಅಂಗಡಿ ನೋಡಿಕೊಳ್ಳಲು ನೇಮಿಸ ಬಹುದು. ಏನೂ ಇಲ್ಲದೆ ಇದ್ದರೆ ನಮ್ಮನೆಯಲ್ಲಿ ದೇವರ ಪೂಜೆಗೆ ಇಟ್ಕೊಳ್ಳಬಹುದು. ಆದರೆ ಇಲ್ಲಿ !

ಅಷ್ಟರಲ್ಲಿ ಅವನೇ ಮುಂದುವರೆದು ಹೇಳಿದ.

"ನನ್ನ ಭಾಗದ ದೇವರು ಬಂದಹಾಗೆ ಬಂದಿರಿ. ಸಾಕ್ಷಾತ್ ಈಶ್ವರನಂತೆ ಕಾಣಿಸುತ್ತಿದ್ದೀರಿ. ಇವತ್ತು ನಮ್ಮನೆಯಲ್ಲಿ ತಾಯಿಯ ವೈದೀಕ, ಬರಬೇಕಾಗಿದ್ದ ಬ್ರಾಹ್ಮಣರಿಗೆ ಸೂತಕಬಡಿದು ಅವರು ಬರುವಂತಿಲ್ಲ, ಬೇರೆ ಊರಿಗೆಹೋಗಿ ಬ್ರಾಹ್ಮಣ ರನ್ನು ಕರೆತರಲು ವೇಳೆಯಾಗಿ ಹೋಗುತ್ತೆ, ಅಂದರೆ ಅವರುಗಳು ಊಟ ಮುಗಿಸಿ ಬಿಟ್ಟಿರುತ್ತಾರೆ. ದೇವರೇ ನಿಮ್ಮನ್ನು ಕಳುಹಿಸಿಕೊಟ್ಟ. ಕೃಪೆಮಾಡಿ ನಮ್ಮನೆಗೆ ಬಂದು, ವೈದಿಕ ಮಾಡಿಸಿ ಕೊಡಬೇಕು ಎಂದು ಅಂಗಲಾಚಿದ.

ನನಗೆ ರೆಕ್ಕೆಬಂದಹಾಗಾಯಿತು. ಈ ತನಕ ಷಹರಿನಲ್ಲಿ ಇದೇ ಉಡುಪಿನಲ್ಲಿ ಹೋಗುತ್ತೇನೆ. ನನ್ನ ಕಂಡರೆ ಹಸುಗಳೂ ಬೆದರಿಅರಚುತ್ತವೆ. ಗೋ ಬ್ರಾಹ್ಮಣ ಹತಾಯಂಚ ಎಂದೋ ಏನೋ ? ಜನರು ಯಾರೂ ನನ್ನನ್ನ ಬ್ರಾಹ್ಮಣ ಅಂತ ಕರೆ ಯುಲ್ಲ. ಆಚಾರಿ ಇರಬಹುದು ಎಂದು ಅನುಮಾನ ಪಟ್ಟವರಿದ್ದಾರೆ. ಆದರೆ ಬ್ರಾಹ್ಮಣ ಅಂತ ಯಾರೂ ಮರ್ಯಾದೆ ಮಾಡಿತ್ತಿಲ್ಲ. ಈತ ನನ್ನ ಹುಟ್ಟುಜಾತಿ ಹಿಡಿದು ಮರ್ಯಾದೆ ಮಾಡುತ್ತಿದ್ದಾನೆ ಎಂದು ತುಂಬಾ ಸಂತೋಷವಾಯಿತು. ಅವನ ಜತೆಗೆ ಅವನ ಮನೆಗೆ ಹೋದೆ. ಸ್ನಾನವಮಾಡಿದೆ. ಬಂದಿದ್ದ ಇನ್ನೊಬ್ಬ ಬ್ರಾಹ್ಮಣ ಹುಡುಗ ಮಂತ್ರಗಳೆಲ್ಲಾ ಹೇಳಿದ. ಭರ್ಜರಿ ಊಟಹಾಕಿದರು. ಆಮೇಲೆ ನಾಲ್ಕಾಣೆ ದಕ್ಷಿಣೆ ಕೊಟ್ಟರು. ತುಂಬಾ ಧನ್ಯವಾದ ಹೇಳಿ ಕಳಿಸಿಕೊಟ್ಟರು.

ಹಿಂತಿರುಗಿ ಕೆಮ್ಮಣ್ಣುಗುಂಡಿ ಪ್ರವಾಸ ಮಂದಿರಕ್ಕೆ ಬಂದಾಗ ಮಧ್ಯಾಹ್ನ ೨ ಗಂಟೆ ಆಗಿತ್ತು. ಊಟ ಮಾಡಿ ವರಾಂಡದಲ್ಲಿ ಗ್ರೇಸ್ ಕಾದಿದ್ದಳು. ಎಲ್ಲಿ ಹೋದಿರಿ ? ಊಟ ಆಯ್ತೆ ? ಹುಲಿಗಿಲಿ ಕೈಲಿ ಸಿಕ್ಕಿಕೊಂಡರೇನೋ ಅಂತ ಭಯವಾಯಿತು. ಎಂದೆಲ್ಲಾ ಕೇಳಿದಳು. ನಡೆದ ಸಮಾಚಾರವನ್ನೆಲ್ಲ ಹೇಳಿದೆ. ಬ್ರಾಹ್ಮಣನಾಗಿ ಹುಟ್ಟಿದಮೇಲೆ ಈ ಪಾವಲಿ ಒಂದೇ ನಾನು ಸಂಪಾದಿಸಿರುವುದು ಎಂದೆ. ಹಾಗಾದರೆ ಅದನ್ನು ನನಗೆ ಕೊಡಿ. ನಾನು ಲಾಕೆಟ್ಟಿನಲ್ಲಿಟ್ಟು ಕತ್ತಿಗೆ ಹಾಕ್ಕೋತೀನಿ ಅಂದಳು. "ಬೇಡ ಮಹರಾಯಿತಿ ! ವೈದೀಕದ ದಕ್ಷಿಣೆ ಪಾವಲಿಯನ್ನು ನಿನ್ನ ಕತ್ತಿಗೆ ತಾಳಿ ಹಾಗೆ ನಾನು ಕಟ್ಟಿದರೆ ಆ ಹಳ್ಳಿಯ ಬ್ರಾಹ್ಮಣನ ತಾಯಿ ರೌರವಾದಿ ನರಕಕ್ಕೆ ಹೋಗ್ತಾಳೆ. ಅಂತ ಹೇಳಿದೆ.

ಊರಿಗೆ ಬರುತ್ತಲೂ ಆದಕ್ಕೇ ಕಟ್ಟು ಹಾಕಿಸಿ ಆ ಪಾವಲೀನ ಮೇಜಿನಮೇಲೆ ಮೆರೆಸಿದ್ದೀನಿ " ಎಂದರು.

ಗ್ರೇಸ್ ಆಗ ಜ್ಞಾಪಿಸಿದಳು. ಈಗ ಹೊರಗೆ ಹೋಗಬೇಕು ಬಂಡಾನ್ ಷೆರೀಫರನ್ನು ಆರಕ್ಕೆ ಭೇಟಿಯಾಗ್ತೀನಿ ಅಂದಿದ್ದರಿ. ಕಾರ್ ಸಿದ್ಧವಾಗಿದೆ, ಎಂದಳು ಹೌದು ಮರೆತಿದ್ದೆ, ಇನ್ನೊಂದು ಸರ್ತಿ ಬನ್ನಿ, ಆಗ ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳ್ತೀನಿ. ಈಗ ಅರ್ಜೆಂಟ್ ಆಗಿ ಹೋಗಬೇಕು " ಎಂದು ಧರ್ಮಸಾಗರರು ಹೇಳಿದರು,

" ಇಷ್ಟು ಹೊತ್ತು ನೀವು ಹೇಳಿದ ದಕ್ಷಿಣೆಯ ಕತೆಯೇ ಸ್ವಾರಸ್ಯವಾಗಿದೆ. ಹೋಗಿ ಬನ್ನಿ " ಅಂತ ಸದಾಶಿವಯ್ಯರಿಗೆ ಹೇಳಿ ನಾವೂ ಹೊರಬಿದ್ದೆವು,

—ಬಚ್ಚು



" ಅಮೆರಿಕನ್ ಹದ್ದಿನ ಜತೆ ಸೇರಿಕೊಂಡು ಚೀಣಿ ಉರಗವನ್ನು ಬಡಿದುಹಾಕಬೇಕು " ಅಂತ ಬ್ರಿಟಿಷ್ ಸಿಂಹ ರಷ್ಯಾ ಕರಡಿಗೆ ಹೇಳ್ತಾ ಇದೆ. ತಿಳೀತೇ ?

ತಿನ್ನುವ ಬಾಯಿ

★

" ಯಾರ್ರಪ್ಪ ನೀವು ? "–ಎಂದುವಿಚಾರಿಸಿದಳು ಯಜಮಾನ್ತಿ.

" ತಾಯೀ ನಾವು ಸರ್ಕಾರದ ಪ್ರತಿನಿಧಿಗಳು "–ಎಂದೆ

" ಸರ್ಕಾರದವರೇಪ್ಪ–ನಮ್ಮನ್ನಾಳುವ ಮಹಾ ಮಂದಿಯ ಪ್ರತಿನಿಧಿಗಳೇಪ್ಪ ? ...ಬನ್ನಿ–ಕೂಡಿ–ಗಾಳಿ ಹಾಕೋಣಾಂದ್ರೆ ಹುಡುಗರ್ಯಾರೂ ಇಲ್ವಲ್ಲಾ...ಪಾನಕ ಮಾಡಿ ಕೊಡುತ್ತಿದ್ದೆ–ನಿಮ್ಮ ಸರ್ಕಾರದವರು ಕೊಡೋ ಸಕ್ಕರೇಲಿ ಎಲ್ಲಿಂದ ಸಾಧ್ಯವಪ್ಪಾ ಪಾನಕಕ್ಕೇ...ಇನ್ನು ಕಾಫಿ ಮಾಡಿ ಕೊಡುತ್ತಿದ್ದೆ...ನೀವು ನಾಲ್ಕು ಕೋಟಿ ರೂಪಾಯಿ ಹಾಕಿ ಹಾಲಿನಡ್ಯೆರಿ ತೆಗೆದ್ದೀರಲ್ಲಪ್ಪಾ ; ಅಲ್ಲಿಂದ ಹಾಲು ಬಂದಮೆಲೇ ತಾನೇಪ್ಪಾ ನಾನು ಕಾಯಿಸಬೇಕೂ...ಅದೇನೊ ಅಲ್ಲಿಗೆ ಇನ್ನೂ ಆಸ್ಟ್ರೇಲಿಯಾದಿಂದ ಹಾಲಿನ ಪುಡಿನೇ ಬಂದಿಲ್ಲಂತೆ ಕಣ್ರಪ್ಪಾ...ಅವರಿಗೂ ತೊಂದ್ರೆ ಇದೆ ಪಾಪ...ಎಲ್ರಿಗೂ ತೊಂದ್ರೆಯೇ...ತೊಂದ್ರೆ ಇಲ್ದೆ ಇರೋಳೂಂದ್ರೆ ನಾನೊಬ್ಬಳೇ ಬಡಮುತ್ತೈದೆ ನೋಡೀಪ್ಪ... ಕೂಡಿ ನಿಂತೇ ಇದ್ದೀರಲ್ಲಾ... ಚಾಪೆಹರಕು...ಸಂಕೊಚವೇನೋ ನಿಮಗೆ...ಸರ್ಕಾರದ ಪ್ರತಿನಿಧಿಗಳು ನೀವು ವಿಧಾನಸೌಧದಲ್ಲಿ ಗಂಧದ ಬಾಗಿಲಲ್ಲಿ ಹೋಗಿ ರತ್ನಗಂಬಳಿಮೇಲೆ ಕಿಂಕಾಪಿನ ಪೀಠದಮೇಲೆ ಕೂಡೋವರು.

ಸಂಕೋಚವೇನೋ ಪಾಪ ..ಪರವಿಲ್ಲ ಕೂಡಿ...ಏನುಶಾನೆ ದೂರ ಬಂದಿದ್ದೀರಲ್ಲಾ ಪ್ರಜೆಗಳ ಆರೋಗ್ಯ ವಿಚಾರ್ಸೊಕೆ ಪುರುಸೂತ್ತು ಮಾಡ್ಕಂಡು ಬಂದಹಾಗೆ ಕಾಣುತ್ತೆ...ಬೇರೆ ಒಬ್ಬ ಹುಡುಗನಂಥವನು ಬರ್ತಿದ್ದ ಮುಂಚೆ ಅವನೆಲ್ಲಿ ? ಅವನಿಗೆ ವರ್ಗವಾಯ್ತೆ ?..."

ಅವನು ಬರೇ ಮಲೇರಿಯಾ ಜ್ವರದ ವಿಷಯ ವಿಚಾರ್ಸೋನು...ನಾವು ಈಗ ಬಂದಿರೋದು ನಿಮ್ಮನೇಲಿ ಎಷ್ಟು ಜನ ಇದ್ದೀರಿ ಅಂತ ವಿಚಾರ್ಸೋಕೆ ಬಂದಿರೋರು."

" ಓಹೋ...ಹೌದಪ್ಪ. ಜನಸಂಖ್ಯೆ ವಿಪರೀತ ಆಗ್ತಿದೇಂತ ಪಾಪ ದಂಡಿಯಾಗಿ ಮಕ್ಕಳಿರೋ ಮಂತ್ರಿಗಳೇ ಪೇಚಾಡ್ತಿದ್ದಾರೆ...ಊರಲ್ಲೆಲ್ಲಾ ಜಾಸ್ತಿ ಜನ ಮಕ್ಕಳುಗಳು ಆಗಿ ಹೋದ್ರೆ ಅವರುಗಳ ಮಕ್ಕಳಿಗೆ ತೊಂದ್ರೆ ಆಗೋಲ್ವೇಪ್ಪಾ... ವಿಚಾರಿಸಬೇಕಾದ್ದೆ. ವಿಚಾರ್ಸೀಪ್ಪ..."

" ಅದು ಹಾಗಲ್ಲವಮ್ಮ...ಈಗ ಪಡಿತರ ಪದ್ಧತಿ ಅಂದರೆ ಆಹಾರ ಪದಾರ್ಥಗಳನ್ನ...ರೇಷನ್ ಕಾರ್ಡುಗಳ ಮುಖಾಂತರ ಎಲ್ಲರಿಗೂ ಸಮನಾಗಿ ಸರಿಯಾದ ಬೆಲೆಗೆ

ಸಿಕ್ಕೋಹಾಗೆ ಮಾಡೋ ಏರ್ಪಾಟು ಆಗಿದೆ... ಅದಕ್ಕೆ ನಿಮ್ಮಮನೆಯವರೂ ಅರ್ಜೀಲಿ ಇಂತೆಷ್ಟು ಜನ ಇದ್ದಾರೇಂತ ಬರೆದು ಕೊಟ್ಟಿಲ್ವೇ...ಅದು ಸರಿ ಎಂದು ಖಚಿತಮಾಡ್ಕೊಳ್ಳೋಕ್ಕೋಸ್ಕರ ಬಂದಿದ್ದೀವಿ ಅಷ್ಟೆ "

" ಓಹೋಹೊ...ನೀವು ಆಹಾರ ಮಂತ್ರಿಗಳ ಕಡೆಯವರ ಹಾಗಾದರೇ... ಸರಿ...ಸರಿ...ಸರಿ. ಮಂತ್ರಿಗಳು ಆರೋಗ್ಯವಾಗಿದ್ದಾರೆಯೇಪ್ಪಾ.. ಅವರ ಆರೋಗ್ಯ ಮುಖ್ಯ....ನಮ್ಮಗಳದು ಇದ್ದದ್ದೇ ಬಿಡಿ...ನಾನು ವಿಚಾರ್ಸಿದೇಂತ ಹೇಳಪ್ಪ... ಪಾಪ ಅವರಿಗೆ ಶಾನೆ ಕೆಲಸ ಅಂತ ಕಾಣುತ್ತೆ... ಅಂದ್ಹಾಗೇ ಪೇಪರಲ್ಲಿ ದಿನಬೆಳಗಾದರೆ ಕಳ್ಳದಾಸ್ತಾನು ಸಿಕ್ಕು ಬಿಡ್ತು... ಅಂತ ಬರ್ತಿರುತ್ತೇ...ಆ ದಾಸ್ತಾನುದಾರರನ್ನ ನೇಣು ಹಾಕ್ತಿರೇಪ್ಪಾ..."

" ತಾಯಿ ಆ ವಿಷಯ ನಮಗೆ ಸೇರಿದ್ದಲ್ಲ...ಮೇಲಾಗಿ ಅದೆಲ್ಲಾ ನಮಗ್ಯಾಕೆ ? ನೀವೆಷ್ಟು ಜನ ನಿಮ್ಮನೇಲಿ ಹೇಳಿ. ಅಷ್ಟು ವಿಚಾರ್ಸೋದು ನನ್ನ ಕೆಲಸ.. ಅವರವರ ಕೆಲಸ ಅವರವರಿಗೆ ತಾಯಿ..."

" ಅದು ಸರಿ–ಅದು ಸರಿ ಅವರವರ ಕೆಲಸ ಅವರವರಿಗೆ...ಅವರವರನ್ನು ಕಾಪಾಡೋದು ಅವರವರ ಕೆಲಸ.. ಚಿನ್ನದಿಂದ ಅಕ್ಕಿ. ಗೋಧಿ. ಮೈದಾ, ರವೆ, ಸಕ್ಕರೆ, ಶೀಮೆ ಎಣ್ಣೆ, ಸಿಮೆಂಟುಗಳವರೆಗೆ ಅವರವರು ಸಿಕ್ಕಿಬಿದ್ದಾಗ ಅವರನ್ನು ಬಿಡಿಸಿ ಮತ್ತಷ್ಟು ದಾಸ್ತಾನು ಮಾಡಿಕೊಂಡು ಬೆಲೆ ಏರಿಸಿದಾಗ ಮತ್ತೆ ಸಿಕ್ಕು ಮತ್ತೆ ಅವರನ್ನು ಬಿಡಿಸೋ ಕೆಲಸ ಇವರದಲ್ಲವೇ ?...ಹಿ ಹಿ...ಹೌದಪ್ಪ ಹೌದು ಅದ್ಯಾರೋ ಪಾಪ ಕಳಿಂಗ ದೇಶದ ಭಕ್ತ ಪಟ್ನಾಯಕ ಅಂಬೋನೂ ಸಿಕ್ಕಿಬಿದ್ದಿದ್ದರೂ ಅವನ್ನ ಬಿಡಿಸೋಕೆ ಕಾನೂನೇ ಹಿಂದೆ ಮುಂದೆ ನೋಡ್ತಿದೆಯಂತೆ ?... ಕಷ್ಟನಪ್ಪ.. ಕಷ್ಟ ಅವರವರೂಂತ ಆದಮೇಲೆ ಶಿಕ್ಷೆ ಮಾಡೋದು ಶಾನೆ ಕಷ್ಟ... ನಾವುಗಳಿದ್ದೀವಲ್ಲ ಎಲ್ಲಾ ಕಷ್ಟಕ್ಕೂ ಮೂಲವಾಗಿ ಸಾಕಲ್ಲವೆ ?...ಅವರವರ ಕೆಲಸ ಅವರವರಿಗೆ .. "

" ನರಸಿಂಹಯ್ಯ ಒಂದನೇ ಹೆಸರು ಇವರು ಇಲ್ಲಿದ್ದಾರೆಯೆ ?

ತಾಯಿ ! ಇವರು ನಿಮಗೇ..."

" ಅವರು ಮತ್ತೆಲ್ಲಿಗೆ ಹೋಗಿ ಇರೋಕೆ ಸಾಧ್ಯವಪ್ಪಾ...ನನ್ನ ಅಳಿಯಂದ್ರು ಇವರು...ಅಯ್ಯಾ ನಿಮ್ಮ ಸರ್ಕಾರದ ವಿದ್ಯಾಮಂತ್ರಿಗಳಿಗೆ ಹೇಳಿ ಇವರಿಗೆ ಸಂಗೀತ ನಾಟಕ ಅಕ್ಯಾಡಮಿ ಪ್ರಶಸ್ತಿ ಕೊಡಿಸೀಪ್ಪ...ನಾಟಕದ ನರಸಿಂಹಯ್ಯನೋರೂಂದ್ರೆ ಅವರಿಗೂ ಗೊತ್ತು...ಆಗಲಾದ್ರೂ ಇವರು ಮಾವನ ಮನೆ ಬಿಟ್ಟಾರು..."

" ಡಾ॥ ಸಂಜೀವ್..."

" ನನ್ನ ಎರಡನೇ ಅಳಿಯಂದ್ರಪ್ಪಾ ಅವರೂ ಇಲ್ಲೇ ರಿಕಾಣಿ. ಕಷ್ಟಕಾಲ ನೋಡಿ ಎಲ್ಲಾ ಡಾಕ್ಟರಂಗಳೂ ಔಷಧಿ ಕೊಟ್ಟು ಜೀವನ ಮಾಡಿದರೆ ಇವರು ಬರೀ ಗುಳಿಗೆ ಗುಟಿಕೆ ಭಸ್ಮ ಲೇಹ್ಯ ತಿಂದು ಜೀವನ ಮಾಡ್ತಾರೆ...ನಮ್ಮ ಜೀವ ತೆಗಿತಿದ್ದಾರಪ್ಪಾ...ಅವರೂ ಇಲ್ಲೇ ರಿಕಾಣಿ."

" ಶ್ರೀಯುತ ಜೀವಣ್ಣರಾವ್..."

" ಜೀವವಿಮೆ ಏಜೆಂಟು...ಮೂರ್ನೆ ಅಳಿಯಂದ್ರು, ಪಾಪ ಅವರಿಗೇ ಜೀವಕ್ಕೆ ಹಿತವಿಲ್ಲ. ಅಸ್ತಮ ಪೇಷಂಟು...ಮಾವನ ಮನೆಯೇ ಅವರದ್ದೂ ವಾಸ....ಚಿಕ್ಕ ಮನೆ ದೊಡ್ಡ ಸಂಸಾರವಪ್ಪ...ನಮ್ಮ ಸರ್ಕಾರದಹಾಗೇನೆ ಜನಬಲ ಹೆಚ್ಚು ಧನಬಲ ಕಡಿಮೆ—ದುಡಿಯೋರು ಕಡಿಮೆ ತಿನ್ನೋ ಜನ ಹೆಚ್ಚು—ಶರೀರ ದೊಡ್ಡದು ತಲೆ ಚಿಕ್ಕದು..."

" ರುಕ್ಕಮ್ಮ "
" ಶಿವೂ " ——————> " ಜೀವಣ್ಣನ ಹೆಂಡ್ತಿ ನನ್ನ ಮಗಳು "

" ಕಡೇಮಗ—ಸಕ್ಕರೆ, ಕಾಫಿಬೀಜಗಳಿಗೆ ಕ್ಯೂ ನಿಂತು ಓದಲು ಪುರುಸೊತ್ತಿಲ್ಲದೆ ಪಿ. ಯು. ಸಿ. ನಲ್ಲಿ ಮಾರ್ಚಿ–ಸೆಪ್ಟೆಂಬರ್ ಮಾರ್ಚಿ ಅಂತ ದಂಡಯಾತ್ರೆ ಸಾಗಿದೆ. ಒಳ್ಳೆ ಹುಡುಗ. ತಾಯಿಯಂತೆ ಮನಸ್ಸು ತಂದೆಯಂತೆ ಬುದ್ಧಿ..."

" ಬಲರಾಮು "

" ಹಿರೇಮಗ ಫ್ಯಾಮಿಲಿ ಪ್ಲಾನಿಂಗ್ ಇಲಾಖೇಲಿ ಕೆಲಸ ಕಾಣ್ರಪ್ಪಾ "

" ರಂಗ–ಜಲಜ–ಸರೋಜ–ಕುಮುದ–ವತ್ಸಲ ವಿಠ್ಠಲಮೂರ್ತಿ–ಗೋಪಾಲ "

" ಎಲ್ಲಾ ಮೊಮ್ಮಕ್ಕಳಪ್ಪ ಬಲರಾಮುನ ಮಕ್ಕಳು..."

" ದೊಡ್ಡಸಂಸಾರಮಂದಿಗರಮ್ಮ... ಈ ಸಾವಿತ್ರಿ ಯಾರು ? "

" ಮನೆ ಕೆಲಸದ ಹುಡುಗಿ...ಹುಡುಗ ಏನೂ ಅವಳಿಗೂ ಎರಡು ಮಕ್ಕಳು... ಅದೆಂಥುದೋ ಸ್ಲಂ ಕ್ಲಿಯರಿಂಗ್ ಅಂತ ಹೇಳಿ ಆವಳ ಗುಡಿಸಲು ಕಿತ್ತು ಚೊಕ್ಕಟ ಮಾಡಿದರಂತೆ ಊರ್ನ...ಅದೇಜಾಗದಲ್ಲೇ ಪಾಪ ಬಡ ಮಕ್ಕಳಿಗೋಸ್ಕರ ದೊಡ್ಡ ಬಂಗ್ಲೆ ಮಾಡ್ತಾರಂತೆ.. ಒಳ್ಳೆ ಕೆಲ್ಸವೇ... ಆದ್ರೂ ನಮ್ಮ ಸಾವಿತ್ರಿಗೆ ಗುಡಿಸಲು ಇಲ್ಲ. ಮನೆಹಿತ್ತಲಲ್ಲಿಯೇ ಕೊಂಚ ಜಾಗಕೊಟ್ಟಿದ್ದೇನೆ...ಇನ್ನೇನು ಮಾಡೋದು! ..... ಅವಳನ್ನು ನನ್ನ ಸಂಸಾರದ ಜನಗಳ ಜೊತೆಗೇ ಸೇರಿಸಿದ್ದೀನಿ..."

" ಕಪಿಲಾಬಾಯಿ "

" ನಾನೇ ಕಣ್ರಪ್ಪ ಮನೆಯ ಯಜಮಾನ್ತಿ...ಎಲ್ಲಾ ಸಂಸಾರದಭಾರ ನಾನು ಹೊರಬೇಕಾಗಿದೆ ನೋಡಿ."

" ಚಿಂತಾಮಣಿರಾವ್ "

" ನಮ್ಮ ಯಜಮಾನ್ರು....ಇಸ್ಪೀಟು ಆಟದಲ್ಲಿ ದಿನಾ ಹತ್ತು ರೂಪಾಯಿ ಕಳೀತಾರೆ. ಹೆಸರಿಗೆ ಲಾಯರು ನನ್ನ ತೌರುಮನೆ ಆಸ್ತಿಯಿಂದ಼್ಲೆ ಸಂಸಾರ ಸಾಗಬೇಕು...ಅದಿಲ್ಲಿ ಮನೆ ಗುಟ್ಟು ನಿಮ್ಮಗಳ ಮುಂದೆ ಯಾಕೆ ಹೇಳಬೇಕು..."

" ಒಂದ್ಲೋಟಾ ನೀರು ಬೇಕಿತ್ತಲ್ಲ ತಾಯಿ..."

" ನೋಡಿದಿರಾ .ನೀರಂಕಂದಾಯ; ಪುಗುಸಟ್ಟೆ ಕೊಡ್ತಿದ್ದ ನೀರಿನ ರಿಯಾಯ್ತಿನೂ ಇಲ್ಲವಾಗಿದೆ...ಕಾವೇರಿ ನೀರು ಬರುತ್ತಲ್ಲಾ ಆಗ ನೀವೇ ಕುಡಿರಪ್ಪ...ನನ್ನ ಕಣ್ಣೀರೆ ಕೊಡ್ತಿದ್ದೆ ಪಾಪ ನಿಮಗ್ಯಾಕೆ...ಅದೂ ನನಗೇ ಇರ್ಲಿ...ಬಿಸ್ಲಲ್ಲ ಬಂದಿದ್ದೀರೀ ಒಂದು ಚಿಂಬು ಕೊಡ್ತೀನಿ ಕುಡೀರಿ."

—ಅಡ್ಡ ಕುಂಕುಮದ ಹಿರಿಯ ಮುತ್ತೈದೆ ನೀರು ಕುಡಿಸಿದರು. ಕೊಟ್ಟ ಪಟ್ಟೀಗೆ ಇನ್ನೂ ನಾಲ್ಕು ಹೆಸರು ಸೇರಿಸಿದ್ದರೂ ನಾವು ಸರಿಯೆ ಅಂತ ಒಪ್ಕೋತಾ ಇದ್ದೆವು. ಭಾರತದ ಭರ್ತಿ ಇಂಥುವೇ ಕುಟುಂಬಗಳು. ಉಸುರೆತ್ತದೇ ಮುಂದಿನ ಮನೆಗೆ ಹೋದೆವು.

—ದಾಶರಥಿ ದೀಕ್ಷಿತ್

ಅಂಕಿ ಗುಡ್ಡದಲ್ಲಿದ್ದ ಒಬ್ಬ ಬ್ರಹ್ಮಚಾರಿ
ಅಂಕಿ ಎಣಿಕೆ ಗಣಿತಗಳೆಲ್ಲ ಸದಾಚಾರ
ಮದುವೆ ಆಯ್ತು ಅವನಿಗೆ
ಚದುರೆ ಹೆಣ್ಣಿನ ಜತೆಗೆ
ಅಂಕಿ, ಅಂಶ ಅಂತಿರಲಿ, ಈಗ ಲೆಕ್ಕಕ್ಕೇ ಬಾರ!

* * * *

ಮೊದಲೆಲ್ಲಾ ಕೇಳ್ತಿದ್ರು
ಹೆಣ್ಣಿನ ಮೇಲೆ ಏನ್ ಒಡವೆ ಅಂತ.
ಈಗೆಲ್ಲಾ ಕೇಳ್ತಾರೆ
ಹೆಣ್ಣು ತೊಟ್ಟಿದ್ದಾಳೆಯೆ? ಮಂಕಿ! ಅಂತ.

ಅಯ್ಯೋ! ಪಾಪ!

ಬಸ್ ನಿಂತಿರೋವಾಗ ಡ್ರೈವರ್ ಮಹಾಶಯರು ಬೀಡಿ ಸೇದುತ್ತಲೋ ಅಥವಾ ತೂಕಡಿಸುತ್ತಲೋ ಸಾಧುಗಳ ತರಹ ಕಾಣಿಸಿ ಕೊಳ್ಳುತ್ತಾನೆ. ಆದರೆ ಬಸ್ ಓಡಿಸುಕ್ಕೆ ಶುರುಮಾಡುತ್ತಿದ್ದ ಹಾಗೆಯೆ ಏನೋ ಆವೇಶ ಬಂದು. ಹುಚ್ಚು ಹುಚ್ಚಾಗಿ ಬಿಡ್ತಾನೆ. ಇದು ಎಲ್ಲರೂ ಕಂಡ ಸಂಗತಿ.

ಆದರೆ ಮೊನ್ನೆ ಬಸ್‌ನಿಂತಿರುವಾಗಲೇ ಡ್ರೈವರ್ ಹುಚ್ಚು ಹುಚ್ಚಾಗಿ ರೇಗ್ತಾ ಇದ್ದ. ಏಲು ಪೈಲಾಗಿ ಕೂಗ್ತಾ ಇದ್ದ. ಆಂಜನೇಯ ಮೈಮೇಲೆ ಬಂದವರ ಹಾಗೆ ಎಗರಾಡ್ತಾ ಇದ್ದ, " ನಾಮರ್ಧಾಗಳು " — " ಅಡ್ನ ಕಸಬಿಗಳು " — " ಮುಂಡ ಮೋಚಿ ಕೊಳ್ಳುಕ್ಕೆ ಡಿಗ್ರಿ ಬೇರೆ ತೊಕೊಂಡಿದೆ " ಎಂಬ ಕೇವಲ ಪಾರ್ಲಿಮೆಂಟಿನವರ ಉಪಯೋಗಕ್ಕೇ ಮೀಸಲಾದ ಮಂತ್ರಿನಂತಹ ಮಾತುಗಳನ್ನು ಬಾಯಿನಿಂದ ಹೊರಚೆಲ್ಲುತ್ತಿದ್ದ.

ನೋಡ್ತಾನೆ ಇದೀನಿ. ಬಸ್ಸಿನೊಳಗಿಂದ ಸ್ಟಾರ್ಟಿಂಗ್ ಹ್ಯಾಂಡಲನ್ನು ತೆಗೆದು ಕೊಂಡ. ಕತ್ತಿಯಂತೆ ಝಳಪಿಸುತ್ತ ಆದರ ಮೊಂಡ ತುದಿಯನ್ನು ಕಂಡಕ್ಟರ ಹೊಟ್ಟೆಯ ಬಳಿ ತಾಕಿಸಿದ.

ಓಹೋ ಇನ್ನು ಸುಮ್ಮನಿರಬಾರದು. ಹುಚ್ಚು ಉಲ್ಬಣವಾದ ಹಾಗಿದೆ. ಅಮೆರಿಕನ್ ಅಕ್ಕಿ ನಾಷ್ಟಾಮಾಡಿರಬಹುದು. ಸುಮಾರು ಕೆರಳಿದ್ದಾನೆ. ಕಂಡಕ್ಟರೂ ತೆಳ್ಳನೆ ಯುವಕ. ಅಂತ ಡ್ರೈವರನ ಹತ್ತಿರಕ್ಕೆ ಓಡಿದೆ.

" ಅಯ್ಯಾ ! ಏನಾಯ್ತಯ್ಯ ಹೇಳು. ಸರಿಪಡಿಸೋಣ. ಮಾತಾಡಿ ಸಂಧಾನ ಮಾಡೋಣ. ಶಕ್ತಿಪ್ರಯೋಗ ಒಳ್ಳೆಯದಲ್ಲ. ಎಂದು ರಾಜತಂತ್ರಿಗಳ ತರಹ ಉಪದೇಶ ಮಾಡಿದೆ. ಡ್ರೈವರನಿಗಿಂತ ನಾನು ಕಟ್ಟುಮಸ್ತಾಗಿದ್ದೆ. ತದುಕಿ ಅವನನ್ನ ಹತೋಟಿಗೆ ತರಬಹುದು ಎಂದು ಭರವಸೆ ಇತ್ತು ನನಗೆ. ಅಂತಹವರು ಶಾಂತಿ ಸಂಧಾನದ ಮಾತನಾಡಿದರೆ ಫಲ ಕೊಡುವುದು. ನನ್ನ ಕಡೆ ದುರುಗುಟ್ಟಿಕೊಂಡು ನೋಡಿದ ಡ್ರೈವರ್. ಅವನ ಕೈಲಿದ್ದ ಸ್ಟಾರ್ಟಿಂಗ್ ಹ್ಯಾಂಡಲಿಗೆ ಕೈ ಹಾಕಿದೆ. ತೆಪ್ಪಗಿದ್ದ, ಅದನ್ನು ನನ್ನ ಕೈಲಿ ಜೋಪಾನ ಮಾಡಿದೆ. ಆಮೇಲೆ " ಏನಾಯ್ತು ? ಹೇಳು ? " ಎಂದೆ.

" ನೋಡಿ ಸಾರ್, ಓದಿ ಪ್ಯಾಸು ಮಾಡಿದ್ದಾನಂತೆ, ಹೊಸದಾಗಿ ಕಂಡಕ್ಟರ್ ಕೆಲಸಕ್ಕೆ ಸೇರಿಕೊಂಡಿದ್ದಾನಂತೆ. ಯಾವ್ಯಾವುದೋ ದೊಡ್ಡ ಮನುಷ್ಯರ ಮೊಹನತ್ತು ಸರ್ಟಿಫಿಕೇಟ್ ತಂದಿದ್ದಾನಂತೆ. ಭಡವ ! ಮೂರು ಟ್ರಿಪ್ ಬಸ್ ಓಡುವುದರೊಳಗೆ ಆರು ಸರ್ತಿ ನನ್ನ ಹತ್ತಿರ ಬಂದು " ಟಿಕೆಟ್ ಟಿಕೆಟ್ " ಅಂತ ನನಗೇ ಮಾರುಕ್ಕೆ ಬರ್ತಾನೆ. ರೇಗಿ ಹೋಗಿದೆ. ಒಡ್ದು ಬಿಡೋಣ ಅನ್ನಿಸುತ್ತೆ " ಎಂದು ಹೇಳಿದ.

ಅಯ್ಯೊ ! ಪಾಪ ! ಎನಿಸಿತು.

— ಪ್ರಸಾದ್

ಏನಾಯ್ತೋ !

★

ಹಿಂದಿನ ಮೆಟ್ಟಲು ನೋಡಿದ್ದೀರಾ? ನಿಮ್ಮನೆ ಹಿತ್ತಲ ಬಾಗಿಲ ಮೆಟ್ಟಲಲ್ಲರೀ! ಹಿಂದಿನ ಕಾಲದಲ್ಲಿ ಬೈಸಿಕಲ್ಲಿನ ಹಿಂದಿನ ಚಕ್ರಕ್ಕೆ ಹಾಕುತ್ತಿದ್ದರಲ್ಲ ಅಡಿಮೆಟ್ಟಲು! ಅದೇನಾಯ್ತೋ? ಕಾಣಿಸೋದೇ ಇಲ್ಲ.

ಜ್ಞಾಪಕ ಇದೆಯೋ? ಅಡಿ ಮೆಟ್ಟಲ ಮೇಲೆ ಎಡಗಾಲ ತುದಿ ಇಟ್ಟುಕೊಂಡು ಬಲಗಾಲನ್ನು ನೆಲದಮೇಲೆ ಇಟ್ಟು; ಬೈಸಿಕಲ್ಲಿನ "ಮೇಲೆ ಮೈಯ್ಯನ್ನು ಬಾಗಿಸಿ ಎರಡೂ ಕೈಗಳಿಂದ ಹ್ಯಾಂಡಲನ್ನು ಹಿಡಿದುಕೊಂಡು, ಕುಂಟೆಬಿಲ್ಲೆ ಆಡುವವರ ಹಾಗೆ ಬಲಗಾಲನ್ನು ರೆಷೋಕು ಕೊಡುತ್ತಾ ಮುಂದು ಮುಂದಕ್ಕೆ ಹೋಗಿ, ಬೈಸಿಕಲ್ ಓಡುವುದಕ್ಕೆ ಶುರುಮಾಡಿದಾಗ, ಮೋಹಿನಿ ಉಯ್ಯಾಲೆ ಮೇಲೆ ಜೂಗಾಡಿದಂತೆ ಜೂಗಾಡಿ ಬೈಸಿಕಲ್ಲಿನ ಪೀರವನ್ನಲಂಕರಿಸುತ್ತಿದ್ದರು. ಆಮೇಲೆ ಶಾಸ್ತ್ರೋಕ್ತವಾಗಿ ಬಲಗಾಲನ್ನು ಬಲ ಪೆಡಲ ಮೇಲೆ ಇರಿಸಿ, ತುಳಿದು ನಂತರ ಎಡಗಾಲನ್ನು ಅಡಿಮೆಟ್ಟಲ ಮೇಲಿಂದ ತೆಗೆದು ಎಡ ಪೆಡಲ ಮೇಲೆ ಇರಿಸಿ, ತುಳಿಯುತ್ತಿದ್ದರು.

ಬೈಸಿಕಲ್ ಕಚ್ಚೆ ಪಂಚೆ ಉಟ್ಟು, ಮುಚ್ಚಿದ ಕಾಲರ ಅಂಗಿ ತೊಟ್ಟು, ಸರಿಗೆ ರುಮಾಲು ಕಟ್ಟಿ, ಅಡ್ಡ ಗಂಧ ಅಕ್ಷತೆ ಇಟ್ಟು ಈ ರೀತಿ ಬೈಸಿಕಲ್ ಹತ್ತಿ ಕಚೇರಿಗೆ ಹೋಗುತ್ತಿದ್ದ ಶಾಸ್ತ್ರಿಗಳ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ.

ನವ್ಯ ಪದ್ಯ ಹರಿದ ಹಾಗೆ ಆತ ಬೈಸಿಕಲ್ ಮೇಲೆ ಹರಿಯುತ್ತಿದ್ದ. ನದಿಯ ಗಾಂಭೀರ್ಯವಿತ್ತು; ಲತೆ ಅಥವಾ ಲತಾಂಗಿಯ ಬಳುಕುವಿಕೆಯಿತ್ತು; ಶಾಸ್ತ್ರಿಗಳು ಬೈಸಿಕಲ್ಲಿನ ಪಾಣಿಗ್ರಹಣಮಾಡಿ, ಅಡಿಮೆಟ್ಟಲ ಮೇಲೇರಿ ಸವಾರಿ ಮಾಡುತ್ತಿದ್ದುದು!

ಏನಾಯ್ತೋ? ಆ ಅಡಿಮೆಟ್ಟಲು ಈಗಿನ ಬೈಸಿಕಲ್ಲುಗಳಲ್ಲಿ ಕಾಣಿಸುವುದೇ ಇಲ್ಲ

ಜಡ್ಜಿಗಳಿಗೆ ಸಚಿವರ ಅಂತಸ್ತನ್ನು ಕೊಡುವುದಿಲ್ಲವಂತೆ
—ನ್ಯಾಯವೇ? ಜಡ್ಜಿಗಳು ಅಷ್ಟೆಲ್ಲಾ ಬೈಯ್ಯಿಸಿಕೊಳ್ಳುವುದಿಲ್ಲವಲ್ಲ!

ತಾಷ್ಕೆಂಟಿನ ಗಾದೆಗಳು

ತಾಷ್ಕೆಂಟಿಗೆ ಹೋಗಿ ಕೇಳಿದರೆ ತಾಳುಪ್ಪಿಟ್ಟು ಇಲ್ಲ ಅಂದವ
ರಾವಲ್ಪಿಂಡಿಯಿಂದ ರವೆ ಸಜ್ಜಿಗೆ ಕಳಿಸುತ್ತಾನೆಯೋ ?

* * * *

ಬಾಯಿ ಒಳ್ಳೆಯದಾದರೆ, ಊರೂ ಒಳ್ಳೆಯದಾಗಬಹುದು
ಅಂತ ಶಾಸ್ತ್ರಿಗಳ ಆಸೆ.

* * * *

ಕಾಶ್ಮೀರ ಕೈಗೆ ಸಿಕ್ತು ಅಂತ
ತಾಷ್ಕೆಂಟಿಗೆ ಬಿಟ್ಟ ಜಟ್ಕಾನ.

* * * *

ಬೀದೀಲಿ ಬೈದ–ತಾಷ್ಕೆಂಟಿನ ಕೋಣೇಲಿ ಸಂತೈಸಿದ.

* * * *

ಹೊರಟೆಯೋನೋ ಅಯೂಬ ಅಂದರೆ
ಇನ್ನೂ ಚೌಎನ್‌ಲೈ ಕಾಗದ ಬಂದಿಲ್ಲ ಅಂದನಂತೆ.

* * * *

ಏನೋ ಭುಟ್ಟೋ ತಾರಾಟ ಅಂದರೆ
ತಾಷ್ಕಂಟಿನಲ್ಲಿ ತಿಥಿ ಊಟ ಅಂದನಂತೆ.

* * * *

ಹಿಂತಿರುಗುವಾಗ ಶಾಸ್ತ್ರಿಗಳು ಕಾಬೂಲಿನಲ್ಲಿ ಕೆಳಗಿಳಿದರೆ
...ಅಯೂಬ್ " ಆಗುಲ್ಲ " ಅಂತಂದ ಅನ್ನಬಹುದು.

* * * *

ಹಾವನ್ನು ಕೊಂದು ಹದ್ದಿಗೆ ಹಾಕಿದರಲ್ಲ
—ಹಾಗೇನಾದರೂ ಆಗಬಹುದೇ ಅಂತ ಅನಂತನ ಅನುಮಾನ.

* * * *

ಚೀಣಿ ಹಲ್ಲಿ ಶಕುನ ಕೇಳಿ
ಸಾಣೆ ಕಲ್ಲಿನಿಂದ ಹೊಡೆಸಿಕೊಂಡ.

* * * *

ಹಾದರಗಿತ್ತಿ ಕಾಲು ಹಸೆ ಮೇಲೆ ನಿನ್ನದು
—ಸಾಬರಜಟ್ಟಿನ ರೆಕ್ಕೆ ಬಡೀಲಾರದು.


For 3 way Beauty Treatment....
RAJA SNOW
MANYAM & CO
RAJA AMLA HAIR OIL
RAJA Kasturi Soap
MANYAM & CO BANGALORE
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.
FAS

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೪

Koravanji, January 1966



Edited and Published by M. Shivaram
Printed by B. S Iyengar, Bangalore-2